ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 12 ಜೂನ್ 3, 1979 40 ಪೈಸೆ

ಮುನ್ಸಿಪಲ್ ಚುನಾವಣಾ ಫಲಿತಾಂಶ

ರಾಜ್ಯದಲ್ಲಿ ನಡೆದ ಮುನ್ಸಿಪಲ್ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಪಕ್ಷವು ಇತರ ಪಕ್ಷಗಳಿಗಿಂತ, ಮುಖ್ಯವಾಗಿ ಜನತಾಪಕ್ಷಕ್ಕಿಂತ ಹೆಚ್ಚಿಗೆ ಸ್ಥಾನಗಳನ್ನು ಪಡೆದಿದೆ. ರಾಜ್ಯದ ರಾಜಕೀಯ, ಜನತಾಪಕ್ಷದೊಳಗಿನ ಒಳಜಗಳ ಮತ್ತು ಕಾಂಗ್ರೆಸ್ (ಐ)ಗೆ ಇದಿರಾಗಿರುವ ಎಲ್ಲಾ ಶಕ್ತಿಗಳನ್ನು ಒಟ್ಟು ಸೇರಿಸುವುದರಲ್ಲಿ ಜನತಾಪಕ್ಷಕ್ಕಿದ್ದ ನಿರಾಸಕ್ತಿಗಳ ಹಿನ್ನೆಲೆಯಲ್ಲಿ ಇದೇನೂ ಆಶ್ಚರ್ಯವಲ್ಲ.

ರಾಜ್ಯದ ಜನತೆಯ ಆರ್ಥಿಕ ಸಾಮಾಜಿಕ ಸಮಸ್ಯೆಗಳ ನಿವಾರಣೆಗಾಗಿ ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸಿ, ಹೋರಾಡುವುದಕ್ಕೆ ಬದಲು ರಾಜ್ಯದ ಜನತಾಪಕ್ಷವು ವಿಧಾನಸಭೆಗೆ ಸೀಮಿತವಾಗಿ ಕೆಲವೊಂದು ಸಮಸ್ಯೆಗಳ ಬಗ್ಗೆ ಮಾತ್ರ ಗದ್ದಲ ಮಾಡಿದೆ. ಸರ್ವಾಧಿಕಾರ ವಿರೋಧಿ ಶಕ್ತಿಗಳನ್ನು ಒಂದು ಸೇರಿಸಿ, ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಕಾರ್ಯಕ್ರಮ ಹಾಕುವುದಕ್ಕೆ ಬದಲಾಗಿ, ಒಳಜಗಳಕ್ಕೇನೇ ಪ್ರಾಧಾನ್ಯತೆಯನ್ನು ಕೊಟ್ಟಂತೆ ಕಾಣುತ್ತದೆ. ಮುನ್ಸಿಪಲ್ ಚುನಾವಣೆಗಳಲ್ಲಿ, ಅಂದರೆ ನಗರಪ್ರದೇಶದಲ್ಲಿ ಜನತಾ ಪಕ್ಷವು ಸರಿಯಾದ ಧೋರಣೆಯನ್ನು ಅನುಸರಿಸಿ, ಕಾಂಗ್ರೆಸ್ (ಐ)ಗೆ ವಿರೋಧವಿರುವ ಎಲ್ಲಾ ಶಕ್ತಿಗಳೊಡನೆ ಹೊಂದಾಣಿಕೆ ಮಾಡಿಕೊಂಡು, ಕಾರ್ಯಕ್ರಮ

ಸಂಪಾದಕೀಯ

ಗಳ ಆಧಾರದಲ್ಲಿ ಚುನಾವಣಾ ಕಣಕ್ಕಿಳಿದಿದ್ದರೆ ದೊಡ್ಡ ರೀತಿಯ ಜಯವನ್ನು ಗಳಿಸಬಹುದಿತ್ತು. ಆದರೆ ದೊರೆತ ವರದಿಯ ಪ್ರಕಾರ ಈ ಪ್ರಯತ್ನವೇನೇನೂ ನಡೆದಿಲ್ಲ. ಮಾತ್ರವಲ್ಲ ಕೆಲವೆಡೆ ಬೇರೆಯವರು ಪ್ರಯತ್ನ ಮಾಡಿದರೂ, ತಮ್ಮ ಶಕ್ತಿಯ ಬಗ್ಗೆ ಹೆಚ್ಚಿನ ಆತ್ಮವಿಶ್ವಾಸದಿಂದ, ಅದಕ್ಕೆ ಪ್ರೋತ್ಸಾಹವೂ ದೊರೆಯಲಿಲ್ಲ. ಚಿಕ್ಕಮಗಳೂರಿನಲ್ಲಿ ಜನತಾಪಕ್ಷದ ಅಭ್ಯರ್ಥಿಗಳೇ ಇದ್ದಿಲ್ಲ; ಸ್ವತಂತ್ರ ಉಮೇದ್ವಾರರಾಗಿ ಕೆಲವರು ನಿಂತಿದ್ದರು ಎಂಬ ವರದಿಯಾಗಿದೆ. ಚುನಾವಣೆಗೆ ಸ್ಟೇ ಸಿಗಬಹುದೆಂಬ ನಿರೀಕ್ಷೆಯಿಂದ ಪ್ರಚಾರವೂ ನಡೆದಿಲ್ಲ ಎಂಬ ವರದಿಯಿದೆ. ಇದು ಹೌದಾದರೆ ಪರಿಸ್ಥಿತಿಯ ವಾಸ್ತವಿಕತೆಯನ್ನು ತೋರಿಸುತ್ತದೆ.

ಮುನಿಸಿಪಾಲಿಟಿ, ನಗರಸಭೆಗಳು ಜನಸಾಮಾನ್ಯರ ಸಮಸ್ಯೆಗಳ ಪರಿಹಾರದ ಸಂಸ್ಥೆಗಳಾಗುವ ಬದಲು, ರಾಜಕೀಯ ಮತ್ತು ಭ್ರಷ್ಟಾಚಾರದ ನೆಲೆಗಳಾಗಿವೆ. ಪಟ್ಟಣಗಳ ಜನಸಾಮಾನ್ಯರ, ಬಡವರ ಬಗ್ಗೆ ಏನೇನೂ ಕಾಳಜಿ ವಹಿಸುತ್ತಿಲ್ಲ. ಬೆಂಗಳೂರು ನಗರದಂತಹ ದೊಡ್ಡ ನಗರಗಳ ಕಾರ್ಪೊರೇಷನ್‌ಗಳು ಒಂದೆಡೆ ನಗರವನ್ನು ಸುಂದರಗೊಳಿಸಲು ಮಿತಿಯಿಲ್ಲದ ಹಣವನ್ನು ವೆಚ್ಚ ಮಾಡಿದರೆ, ಇನ್ನೊಂದೆಡೆ ಬಡಗುಡಿಸಲುವಾಸಿಗಳನ್ನು ಬೀದಿಗೆಸೆಯುವುದೂ ಇತ್ತೀಚೆಗೆ ಕಂಡುಬಂದಿದೆ. ಲಕ್ಷಾಂತರ ಮಂದಿ ಕಾರ್ಮಿಕರ, ಬಡಗುಡಿಸಲುವಾಸಿಗಳ ಪಾಡು ಹೇಳತೀರದಂತಿದೆ. ಇಷ್ಟೆಲ್ಲಾ ಇದ್ದರೂ ರಾಜ್ಯದ ದೊಡ್ಡ ನಗರಗಳಾದ ಬೆಂಗಳೂರಂತಲ್ಲಿನ ನಗರ ಕಾರ್ಪೊರೇಷನ್‌ಗಳಿಗೆ ಚುನಾವಣೆ ನಡೆದಿದ್ದು, ಜನರ ಪ್ರತಿನಿಧಿಗಳಿದ್ದರೆ ಸ್ವಲ್ಪವಾದರೂ ಪರಿಹಾರ ಸಿಗುತ್ತಿತ್ತು. ಆದರೆ ಈ ಚುನಾವಣೆಗಳನ್ನು ರಾಜಕೀಯ ಕಾರಣಗಳಿಂದ ಮುಂದೂಡುತ್ತಾ ಬಂದಿದೆ ರಾಜ್ಯ ಸರಕಾರ. ವಿರೋಧ ಪಕ್ಷಗಳು ಜಂಟೀ ಕಾರ್ಯಕ್ರಮ ಹಾಕುವ ಬೆದರಿಕೆ ಹಾಕಿದ ಮೇಲೆ, ಈಗ ಕೊನೆಗೆ ಡಿಸೆಂಬರ್‌ನಲ್ಲಿ ಕಾರ್ಪೊರೇಷನ್ ಚುನಾವಣೆಗಳನ್ನು ನಡೆಸಲಾಗುವುದು ಎಂದು ಸರಕಾರ ಹೇಳಿದೆ.

[ಕೊನೆಯ ಪುಟ ನೋಡಿ]

ದುಡಿಯುವ ಮಹಿಳೆಯರಿಂದ

ರಾಜ್ಯಪಾಲರಿಗೆ ಮನವಿ ಅರ್ಪಣೆ

ದುಡಿಯುವ ಮಹಿಳೆಯರ ರಾಷ್ಟ್ರೀಯ ಸಮಾವೇಶವು ಮೇ 30 ರನ್ನು ದುಡಿಯುವ ಮಹಿಳೆಯರ ಬೇಡಿಕೆ ದಿನಾಚರಣೆಯನ್ನಾಗಿ ರಾಷ್ಟ್ರದಾದ್ಯಂತ ಆಚರಿಸಲು ಕರೆ ನೀಡಿತ್ತು. ಬೇಡಿಕೆ ದಿನಾಚರಣೆಯನ್ನು ಕರ್ನಾಟಕ ರಾಜ್ಯದಲ್ಲಿ ಯಶಸ್ವಿಗೊಳಿಸಲು ರಾಜ್ಯದ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯು ಕರೆ ನೀಡಿದ್ದು, ಮೇ 30 ರಂದು ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಯಶಸ್ವಿ ಕಾರ್ಯಾಚರಣೆ ನಡೆದ ವರದಿ ಬಂದಿದೆ.

ಬೇಡಿಕೆ ದಿನಾಚರಣೆಯ ಅಂಗವಾಗಿ ಬೆಂಗಳೂರು ನಗರದಲ್ಲಿ ದುಡಿಯುವ ಮಹಿಳೆಯರ ಸಮಸ್ಯೆ ಬಗ್ಗೆ ವಿಚಾರ ಗೋಷ್ಠಿಯು ಜರುಗಿತು. ಸರಕಾರಿ ನೌಕರರ ಸಂಘದ ಹಾಲಿನಲ್ಲಿ ಮಧ್ಯಾಹ್ನ 2 ಘಂಟೆಯಿಂದ ಸಂಜೆ 5 ಘಂಟೆ ತನಕ ನಡೆದ ವಿಚಾರಗೋಷ್ಠಿಯಲ್ಲಿ ಸಂಘಟಿತ ಮತ್ತು ಅಸಂಘಟಿತ ವಿಭಾಗದ ಸುಮಾರು 300 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು. ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸಿದ ದುಡಿಯುವ ಮಹಿಳೆಯರು, ಸಂಘಟನಾತ್ಮಕವಾಗಿ ಹೋರಾಡಲು ನಿರ್ಧರಿಸಿದರು. ತಾವು ಗಂಡಸರಷ್ಟೆ ಬೀಡಿಗಳನ್ನು ದಿನವೊಂದರಲ್ಲಿ ತಯಾರಿಸಿದರೂ, ಅಂದರೆ ಒಂದ ಸಹಸ್ರ ಬೀಡಿ ಕಟ್ಟಿದರೂ ತಮಗೆ ಸಿಗುವುದು ಕೇವಲ ರೂಪಾಯಿ ಮೂರು ಮಾತ್ರ ಎಂದು ಬೀಡಿಕಾರ್ಮಿಕರಾದ ಶ್ರೀಮತಿ ಜೀನತ್ ಉನ್ನಿಸ್, ಪ್ಯಾರೆ ಜಾನ್, ಫಾತಿಮಾಬೀ ಮತ್ತು ಕೌತುನ್ ಬೀಯವರು ತಮ್ಮ ಸಂಕಷ್ಟವನ್ನು ಹೇಳಿದರು. ಆದರೆ ಅದೇ ಸಂದರ್ಭ ಗಂಡಸರಿಗೆ ಒಂದು ಸಹಸ್ರ ಬೀಡಿಗೆ ರೂ 5–10 ರಂತೆ ಸಿಗುವುದೆಂದರು. ಫುಡ್ ಕಾರ್ಪೊರೇಷನ್‌ನಲ್ಲಿ ದುಡಿಯುವ ವತ್ಸಲಾ ಮೊದಲಾದವರು ಕಾರಣವಿಲ್ಲದೆ ವರ್ಗಾಯಿಸುವ ಮತ್ತು ಇತರ ತೊಂದರೆಗಳನ್ನು ಹೇಳಿದರು. ಶ್ರೀಮತಿ ಗಾಯಿತ್ರಿದೇವಿ ಮತ್ತು ಇತರರೂ ಮಾತನಾಡಿದರು.

ವಿಚಾರಗೋಷ್ಠಿಯು ಮುಗಿದ ಮೇಲೆ ನೂರಾರು ದುಡಿಯುವ ಮಹಿಳೆಯರು ಘೋಷಣೆ ಕೂಗುತ್ತಾ ರಾಜಭವನದತ್ತ ಮೆರವಣಿಗೆ ಹೋದರು. ರಾಜ್ಯ ಸಮನ್ವಯ ಸಮಿತಿಯ ಸಂಚಾಲಕಿ ಮಾಲತಿಯವರ ನೇತೃತ್ವದಲ್ಲಿ ನಿಯೋಗವು ರಾಜ್ಯಪಾಲರಿಗೆ ದುಡಿಯುವ ಮಹಿಳೆಯರ ಬೇಡಿಕೆ ಪಟ್ಟಿಯನ್ನು ಅರ್ಪಿಸಿ, ಇವುಗಳನ್ನು ಜಾರಿಗೊಳಿಸಲು ಒತ್ತಾಯಿಸಿತು. ದುಡಿಯುವ ಮಹಿಳೆಯರ ಮೇಲಿನ ಪಕ್ಷಪಾತ ನೀತಿಯನ್ನು ನಿಲ್ಲಿಸಬೇಕು, ದುಡಿಯುವ ಮಹಿಳೆಯರ ಮಕ್ಕಳನ್ನು ನೋಡಿಕೊಳ್ಳಲು ಸರಿಯಾದ "ಕ್ರೆಶ್" ವ್ಯವಸ್ಥೆ ಎಲ್ಲಾ ಉದ್ಯಮಗಳಲ್ಲೂ ಆಗಬೇಕು, ಸಮಾನ ಕೆಲಸಕ್ಕೆ ಸಮಾನ ವೇತನ ಸಿಗಬೇಕು, ದುಡಿಯುವ ಹಕ್ಕನ್ನು ಮೂಲಭೂತ ಹಕ್ಕೆಂದು ಘಟನೆಯಲ್ಲಿ ಸೇರಿಸಬೇಕು, ಸಂಘಟಿತ ಮತ್ತು ಕೃಷಿ ಕೂಲಿಗಾರ ದುಡಿಯುವ ಮಹಿಳೆಯರೂ ಸೇರಿ ದಿನಕ್ಕೆ ಎಂಟು ಗಂಟೆಯ ಕೆಲಸ ಕಡ್ಡಾಯವಾಗಿ ಜಾರಿಯಾಗಬೇಕು, ನಾಲ್ಕು ತಿಂಗಳ ಹೆರಿಗೆ ರಜಾ ಮತ್ತು ರೂಪಾಯಿ 500 ಹೆರಿಗೆಭತ್ಯೆ ದೊರೆಯಬೇಕು, ನಗರಗಳಲ್ಲಿನ ದುಡಿಯುವ ಮಹಿಳೆಯರಿಗೆ ಸರಿಯಾದ ಸಾರಿಗೆ ವ್ಯವಸ್ಥೆ ದೊರೆಯಬೇಕು ಎಂಬಿತ್ಯಾದಿ ಬೇಡಿಕೆಗಳು ಬೇಡಿಕೆಯ ಪಟ್ಟಿಯಲ್ಲಿ ಸೇರಿದ್ದುವು.

ನಗರದಲ್ಲಿ ಜರುಗಿದ ಬೇಡಿಕೆ ದಿನಾಚರಣೆಯ ಕಾರ್ಯಕ್ರಮವು ರಾಜ್ಯದ ಚರಿತ್ರೆಯಲ್ಲೆ ಮೊದಲಿನದಾಗಿದ್ದು, ರಾಜ್ಯದಾದ್ಯಂತ ನಡೆಯತಕ್ಕ ಮುಂದಿನ ಹೋರಾಟಗಳಿಗೆ ಸ್ಫೂರ್ತಿಯನ್ನಿತ್ತಿದೆ.

●

ಹತ್ತಿಗಿರಣಿ ಕಾರ್ಮಿಕರ ಸಂಯುಕ್ತ ಹೋರಾಟ

ರಾಷ್ಟ್ರದಾದ್ಯಂತ ಹತ್ತಿಗಿರಣಿ ಕಾರ್ಮಿಕರಿಗೆ ತಿಂಗಳಿಗೆ ಸುಮಾರು ರೂ. 500 ವೇತನ ಮತ್ತು ಇತರ ಸವಲತ್ತುಗಳು ದೊರಕುತ್ತಿದ್ದರೆ, ಕರ್ನಾಟಕ ರಾಜ್ಯದಲ್ಲಿ ಸಿಗುವುದು ಸುಮಾರು ರೂ. 375. ವೇತನದಲ್ಲಿರುವ ಅಸಮಾನತೆಯಲ್ಲದೆ ವರ್ಕ್ ಲೋಡ್ ಇಲ್ಲಿ ಬಹಳ ಜಾಸ್ತಿ. ರಾಜ್ಯದಲ್ಲಿನ ಹತ್ತಿಗಿರಣಿ ಕಾರ್ಮಿಕರಿಗಿರುವ ಸಮಸ್ಯೆಗಳ ಪರಿಹಾರಕ್ಕೆ ಕಾರ್ಮಿಕರ ಸಂಘಟನೆಗಳ ಸಂಯುಕ್ತ ಚಳುವಳಿ ನಡೆದಿಲ್ಲ.

ಬೆಂಗಳೂರು ನಗರದ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನಿಗೆ ಸೇರಿದ ಮೈಸೂರು ಮಿಲ್ಲಿನಲ್ಲಿ ಸಿ. ಐ. ಟಿ. ಯು. ಯೂನಿಯನ್ ಪ್ರಾರಂಭವಾದಮೇಲೆ, ಕಾರ್ಮಿಕರ ಸಮಸ್ಯೆಗಳ ಬಗ್ಗೆ ಮತ್ತು ಇತರ ರಾಜ್ಯಗಳಲ್ಲಿಗೂ ಇಲ್ಲಿಗೂ ಇರುವ ಅಂತರದ ಬಗ್ಗೆ ಅಭ್ಯಾಸ ಮಾಡಲಾಯಿತು. ಸಂಯುಕ್ತ ಚಳುವಳಿಯ ಅಗತ್ಯದ ಬಗ್ಗೆ ಕಾರ್ಮಿಕರಿಗೂ ಮನದಟ್ಟು ಮಾಡಲಾಯಿತು. ಈ ಸಂಯುಕ್ತ ಚಳುವಳಿಯ ಕಾರ್ಯಕ್ರಮಕ್ಕೆ ಮೈಸೂರು ಮಿಲ್ಲು ಮತ್ತು ಮಿನರ್ವ ಮಿಲ್ಲಿನ ಕಾರ್ಮಿಕರು ಮುಂದಾದರು. ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ. ಮತ್ತು ಶ್ರೀರಾಮುಲು ಅವರ ನೇತೃತ್ವದ ಐ. ಎನ್. ಟಿ. ಯು. ಸಿ. ವಿಭಾಗದ ಸಂಘಟನೆಗಳು ಸಂಯುಕ್ತ ಚಳುವಳಿಗೆ ಮುಂದಾದುವು. ಆದರೆ ಇಂದಿರಾ ಕಾಂಗ್ರೆಸ್ ವಿಭಾಗ (ಬಹಳ ಕಡಿಮೆ ಸಂಖ್ಯೆಯಲ್ಲಿರುವುದಾದರೂ) ಇದರಿಂದ ದೂರ ನಿಂತಿತು. ಮ್ಯಾನೇಜ್‌ಮೆಂಟು ಯೂನಿಯನ್‌ಗಳ ಬಲಾಬಲ ತಿಳಿಯದೆ ಮಾತುಕತೆ ಮಾಡುವುದಿಲ್ಲ ಎಂಬ ಧೋರಣೆಯನ್ನು ತಳೆದಿತ್ತು.

ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಮ್ಯಾನೇಜ್‌ಮೆಂಟು ಮಾತುಕತೆಗೆ ಬರುವಂತೆ ಒತ್ತಾಯಿಸಲು ಗಿರಣಿ ಕಾರ್ಮಿಕರು ಹೋರಾಟ ಪ್ರಾರಂಭಿಸಿದರು. ಏಪ್ರಿಲ್‌ನಲ್ಲಿ ಬೇಡಿಕೆಯ ವಾರವನ್ನು ಆಚರಿಸಲಾಯ್ತು. ನಿಯೋಗವೊಂದು ಕೇಂದ್ರದ ಉದ್ಯಮ ಮಂತ್ರಿಯವರನ್ನು ಭೆಟ್ಟಿಯಾಯಿತು. ಇವುಗಳಿಂದ ಏನೂ ಪರಿಣಾಮವಾಗದೇ ಇರುವಾಗ 28.5.79 ರಂದು ಸಂಜೆ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನಿಗೆ ಸೇರಿದ ಮೈಸೂರು ಮಿಲ್ಲು ಮತ್ತು ಮಿನರ್ವ ಮಿಲ್ಲಿನ ಸುಮಾರು 3000 ಕಾರ್ಮಿಕರು ಎನ್.ಟಿ.ಸಿ. ಆಫೀಸಿಗೆ ಮೆರವಣಿಗೆಯಲ್ಲಿ ಹೋದರು. ಕಾರ್ಪೊರೇಷನ್ನಿನ ಚೆಯರ್‌ಮೇನ್ ಶ್ರೀ ಚೆಟ್ಟೂರು ಅವರು ಕಾರ್ಮಿಕ ಮುಖಂಡರುಗಳನ್ನು ಭೆಟ್ಟಿಯಾಗಿ ಜೂನ್ 4ರಿಂದ ಮಾತುಕತೆ ಪ್ರಾರಂಭ ಮಾಡುವುದಾಗಿ ಭರವಸೆ ಇತ್ತರು.

ಆದರೆ ಶ್ರೀ ಚೆಟ್ಟೂರು ಅವರು ಬೇರೆಬೇರೆ ಮಿಲ್ಲಿನೊಡನೆ ಪ್ರತ್ಯೇಕ ಮಾತುಕತೆ ನಡೆಸುವ ಶರತ್ತು ಹಾಕಿರುವರು. ಆದರೆ ಕಾರ್ಮಿಕರು ಮ್ಯಾನೇಜ್‌ಮೆಂಟಿನ ವಿಭಜಿಸಿ ಆಳುವ ತಂತ್ರವನ್ನು ಒಪ್ಪದೆ, ಒಟ್ಟಿಗೆ ಮಾತುಕತೆ ಮಾಡಬೇಕೆಂದು ಒತ್ತಾಯಿಸಿರುವರು. ಕಾರ್ಪೊರೇಷನ್ ಮ್ಯಾನೇಜ್‌ಮೆಂಟು ಒಟ್ಟಿಗೆ ಮಾತುಕತೆ ಮಾಡಿಲ್ಲವಾದರೆ, ಮಾತುಕತೆಗೆ ಬಹಿಷ್ಕಾರ ಹಾಕಲು

[ಕೊನೆಯ ಪುಟ ನೋಡಿ]

ಕೃಷಿ ವಿಶ್ವವಿದ್ಯಾಲಯದಲ್ಲಿನ ಕೃಷಿ ಕಾರ್ಮಿಕರ ಬವಣೆ

ಕೃಷಿ ವಿಶ್ವವಿದ್ಯಾಲಯದ ವಿವಿಧ ಸಂಶೋಧನಾ, ಶೈಕ್ಷಣಿಕ ಕೇಂದ್ರಗಳಲ್ಲಿ ನೂರಾರು ಕೃಷಿ ಕಾರ್ಮಿಕರು ಫಾರ್ಮ್ ಲೇಬರ್ ಎಂದು ತಿಂಗಳ ಕೂಲಿಯ ಮೇಲೆಯೂ, ಸಾವಿರಾರು ಕೃಷಿ ಕಾರ್ಮಿಕರು ದಿನಕೂಲಿಯ ಮೇಲೆಯೂ ಬಹಳ ವರ್ಷಗಳಿಂದಲೂ ದುಡಿಯುತ್ತಾ ಬಂದಿರುತ್ತಾರೆ. ಇವರಲ್ಲಿ ಹೆಚ್ಚಿನ ಕೃಷಿಕಾರ್ಮಿಕರು ಭೂರಹಿತರಾಗಿದ್ದು ಅತ್ಯಂತ ಕಡಿಮೆ ಕೂಲಿಯನ್ನು ಪಡೆಯುವವರಾಗಿದ್ದು ಅತ್ಯಂತ ತುಳಿತ, ಶೋಷಣೆಗಳಿಗೆ ಒಳಗಾಗಿ ನಾನಾ ರೀತಿಯ ಕಷ್ಟ ಕಾರ್ಪಣ್ಯಗಳನ್ನೆದುರಿಸುತ್ತಿದ್ದಾರೆ. ಇವರ ಸಮಸ್ಯೆ ಬಗ್ಗೆ ಸರಕಾರವಾಗಲೀ ಕೃಷಿ ವಿಶ್ವವಿದ್ಯಾಲಯದ ಆಡಳಿತ ವರ್ಗವಾಗಲೀ ಯಾವ ಕ್ರಮಗಳನ್ನೂ ತೆಗೆದುಕೊಂಡಿಲ್ಲ.

ಧಾರವಾಡದ ಪ್ರಾದೇಶಿಕ ಸಂಶೋಧನಾ ಕೇಂದ್ರದಲ್ಲಿ ದುಡಿಯುವ ಹೆಚ್ಚಿನ ಕೃಷಿ ಕಾರ್ಮಿಕರು ಸುತ್ತಮುತ್ತಲ ಹಳ್ಳಿಯವರಾಗಿದ್ದು, ತಮ್ಮ ಭೂಮಿಯನ್ನೆಲ್ಲಾ ಕೃಷಿ ಮಹಾ ವಿದ್ಯಾಲಯಕ್ಕಾಗಿ ಕಳೆದುಕೊಂಡವರಾಗಿರುತ್ತಾರೆ. ಭೂಮಿಯನ್ನು ಕಳೆದುಕೊಂಡುದಲ್ಲದೆ, ಅದಕ್ಕೆ ತಕ್ಕ ಪರಿಹಾರ ಧನವೂ ಸಿಗಲಿಲ್ಲ; ಕೃಷಿ ಸಂಶೋಧನಾ ಕೇಂದ್ರದಲ್ಲಿ ಕೆಲಸವೂ ಸಹ ಖಾಯಂ ಸಿಕ್ಕಿರುವುದಿಲ್ಲ. ಫಾರ್ಮ್ ಲೇಬರ್ ಎಂದು ಕರೆಯುವವರಿಗೆ ತಿಂಗಳಿಗೆ ಕನಿಷ್ಟ ರೂ. 120-00 ಇದ್ದು, ವರ್ಷಕ್ಕೆ ರೂ. 10 ಹೆಚ್ಚಿಸಬೇಕೆಂದಿದ್ದರೂ ಈ ತನಕ ಇದು ಆಗಿಲ್ಲ. ದಿನಕೂಲಿಯವರಿಗೆ ಗಂಡಸರಿಗೆ ಕೆಲವರಿಗೆ ದಿನಕ್ಕೆ ರೂ 4-10 ಇದ್ದರೆ ಉಳಿದ ಹೆಚ್ಚಿನವರಿಗೆ, ಸ್ತ್ರೀಯರಿಗೆ ರೂ. 3-25 ಕೂಲಿಕೊಡಲಾಗುತ್ತಿದೆ. ದಿನಕ್ಕೆ ಎಂಟು ತಾಸಿಗಿಂತಲೂ ಹೆಚ್ಚಿಗೆ ಬಿಸಿಲು ಮಳೆ ಎನ್ನದೆ ಹೊಲದಲ್ಲಿ ಪರಿಶ್ರಮದಲ್ಲಿ ತೊಡಗಿರುವ ಇವರ ಗೋಳಿನ ಕಥೆಯು ರಾಜ್ಯ ಸರಕಾರದ ಸಮಾಜವಾದದ ಪೊಳ್ಳು ಘೋಷಣೆಗೆ ಒಂದು ಉದಾಹರಣೆಯಷ್ಟೆ! ಹೈಸ್ಕೂಲು ವಿದ್ಯಾಭ್ಯಾಸದ ತನಕ ಕಲಿತಿರುವವರೂ ಸೇರಿರುವ ಈ ಸಹಸ್ರಾರು ಕೃಷಿ ಕಾರ್ಮಿಕರಿಗೆ ಕಾನೂನುಗಳ ಯಾವುದೇ ಸೌಲಭ್ಯಗಳು ದೊರೆಯುತ್ತಿಲ್ಲ. ಹಲವು ದಶಕಗಳಿಂದ ಶ್ರಮಿಸುತ್ತಾ ಬಂದವರಿಗೆ ಕೆಲಸ ಖಾಯಂ ಆಗಿಲ್ಲ. ಪಂಥನಗರದಲ್ಲಿ ನಡೆದಂತ ಘಟನೆಗಳಿಂದಲೂ ಸಂಬಂಧಿಸಿದ ಅಧಿಕಾರಿಗಳು ಎಚ್ಚೆತ್ತಿಲ್ಲ. ಆದರೆ ಇದೀಗ ಈ ಕಾರ್ಮಿಕರು ಎಚ್ಚೆತ್ತು ಸಂಘಟಿತರಾಗುತ್ತಲಿದ್ದಾರೆ. ಕೃಷಿವಿಶ್ವವಿದ್ಯಾಲಯದ ಅಂಗ ಸಂಸ್ಥೆಗಳಿರುವ ಬೆಂಗಳೂರು, ಧಾರವಾಡ, ಮಂಗಳೂರು, ರಾಯಚೂರು, ಮಂಡ್ಯ, ಮೂಡಿಗೆರೆ ಮೊದಲಾದೆಡೆಗಳಲ್ಲಿನ ಕೃಷಿಕಾರ್ಮಿಕರನ್ನು ಸಂಘಟಿಸಿ ಪ್ರಜಾಸತ್ತಾತ್ಮಕ ಹೋರಾಟವನ್ನು ನಡೆಸುವುದಕ್ಕೆ ಧಾರವಾಡದ ಕೃಷಿಕಾರ್ಮಿಕರು ಮುಂದಾಗಿದ್ದಾರೆ.

ಕಾಂ. ಜಿ. ಎ. ಹಿರೇಮಠ ಇವರು ಅಧ್ಯಕ್ಷರಾಗಿಯೂ, ಕಾಂ. ಕದಮ್ ಇವರು ಕಾರ್ಯದರ್ಶಿಯವರಾಗಿಯೂ ಇರುವ, ಇತ್ತೀಚೆಗೆ ಸಂಘಟಿತವಾದ ಧಾರವಾಡ ಕೃಷಿವಿಶ್ವವಿದ್ಯಾಲಯ ಕೃಷಿಕಾರ್ಮಿಕರ ಸಂಘವು ಮೊದಲ ಹಂತವಾಗಿ ಸರಕಾರಕ್ಕೂ, ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿಯವರಿಗೂ ತಮ್ಮ ಸಮಸ್ಯೆಗಳನ್ನು ವಿವರಿಸಿ, ಬೇಡಿಕೆಯ ಪಟ್ಟಿಯನ್ನೊಳಗೊಂಡ ಮನವಿಯನ್ನು ಅರ್ಪಿಸಿದೆ. ಕಾರ್ಮಿಕರ ಸಂಘಕ್ಕೆ ಮಾನ್ಯತೆಯನ್ನೀಯಬೇಕು, ಎಲ್ಲಾ ಕೃಷಿಕಾರ್ಮಿಕರ ಕೆಲಸವನ್ನು ಖಾಯಂಗೊಳಿಸಬೇಕು, ರೂ. 250-5-300-10-340-15-400 ವೇತನ ಶ್ರೇಣಿಯಲ್ಲಿ ಕೂಲಿ ದೊರೆಯಬೇಕು, ವಾರದ ರಜ ಮತ್ತು ಇತರೆಲ್ಲಾ ಸೌಲಭ್ಯಗಳು ದೊರೆಯಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಡಲಾಗಿದೆ. ಸಂಬಂಧಿಸಿದ ಅಧಿಕಾರಿಗಳನ್ನು ನಿಯೋಗವೊಂದು ಭೆಟ್ಟಿಯಾಗಿದೆ. ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಸಂಘಟಿತ ಹೋರಾಟವು ಅನಿವಾರ್ಯವಾಗುವುದೆಂದೂ ನಿಯೋಗದ ಸದಸ್ಯರು ಸಂಬಂಧಿಸಿದವರನ್ನು ಎಚ್ಚರಿಸಿರುವರು.

ಅತೃಪ್ತಿಯ ಸಂಕೇತ

ಪೋಲೀಸರ ಹೋರಾಟ

ಪಂಜಾಬಿನಲ್ಲಿ ಪ್ರಾರಂಭವಾದ ಪೋಲೀಸರ ಹೋರಾಟ ರಾಜಸ್ಥಾನ, ಮಧ್ಯಪ್ರದೇಶ, ದಿಲ್ಲಿ, ಒರಿಸ್ಸಾ ರಾಜ್ಯಗಳಿಗೂ ಹರಡಿದ್ದು, ಅಸ್ಸಾಮ್, ಉತ್ತರ ಪ್ರದೇಶ ಮತ್ತಿತರ ರಾಜ್ಯಗಳಿಗೂ ಹರಡುವ ಲಕ್ಷಣಗಳಿವೆ. ಕರ್ನಾಟಕ ರಾಜ್ಯದಲ್ಲೂ ಪೋಲೀಸರು ತಮ್ಮ ಸಂಘದ ಮೂಲಕ ಬೇಡಿಕೆಗಳನ್ನು ಮುಂದಿಡುವ ಸನ್ನಾಹದಲ್ಲಿರುವರೆಂಬ ವಾರ್ತೆ ಬಂದಿದೆ. ಪೋಲೀಸರ ಹೋರಾಟವು ಬಹಳ ಕಾಲದಿಂದ ಪರಿಹಾರ ಕಾಣದಿರುವ ಇವರ ಸಮಸ್ಯೆಗಳನ್ನು ಎತ್ತಿ ತೋರಿಸುತ್ತದೆ. ತೀವ್ರವಾಗಿ ಬೆಳೆದು ಬಂದ ಅತೃಪ್ತಿಯು ಈಗ ಹೋರಾಟದ ಮೂಲಕ ಪ್ರತಿಫಲನಗೊಳ್ಳುತ್ತಲಿದೆ.

ಪೋಲೀಸ್ ಕಾನ್‌ಸ್ಟೇಬಲ್‌ಗಳು ಇಂತಿಷ್ಟೆ ಗಂಟೆ ಕೆಲಸ ಮಾಡಬೇಕೆಂಬ ನಿಯಮವಿಲ್ಲ. ಇಪ್ಪತ್ತು ಗಂಟೆಗಳಿಗಿಂತಲೂ ಹೆಚ್ಚಿನ ಕಾಲ ಸತತವಾಗಿ, ಬಿಡುವಿಲ್ಲದೆ ಕೆಲಸ ಮಾಡಿಸಬಹುದು. ಇವರಿಗೆ ವಾರದ ರಜಾದಿನವಿಲ್ಲ. ಸರಿಯಾಗಿ ವಸತಿ ವ್ಯವಸ್ಥೆ ಇಲ್ಲ. ಈ ಪರಿಸ್ಥಿತಿಯಲ್ಲಿ ತಮ್ಮ ಬಂಧು, ಬಳಗ ಮತ್ತು ಕುಟುಂಬದಿಂದ ಬೇರ್ಪಡಿಸಿ ದೂರವಿರಬೇಕಾದ ಸಂದರ್ಭವೂ ಬಹಳ. ಇತರ ಸರಕಾರಿ ಉದ್ಯೋಗಕ್ಕೆ ಹೋಲಿಸಿದಲ್ಲಿ ಪೋಲೀಸರಿಗೆ ದೊರೆವ ಸಂಬಳ ಕಡಿಮೆ. ಕೆಲಸದಲ್ಲಿ ಭಡ್ತಿಯಾಗುವ ಸಾಧ್ಯತೆ ಇಲ್ಲವೆಂದರೂ ತಪ್ಪಲ್ಲ.

ಸರಕಾರಕ್ಕೆ ಈ ಸಮಸ್ಯೆಗಳ ಬಗ್ಗೆ ಅರಿವಿಲ್ಲವೆಂದಲ್ಲ. ಈ ಹಿಂದೆ ದಿಲ್ಲಿ, ಬಿಹಾರ ಮೊದಲಾದೆಡೆಗಳಲ್ಲಿ ಪೋಲೀಸರು ಸಂಘಟಿತ ಹೋರಾಟಕ್ಕೆ ಪ್ರಯತ್ನಿಸಿದ್ದರು. ಆದರೆ ಅವನ್ನು ದಮನ ಮಾಡಲಾಗಿತ್ತು. ಕಳೆದ ವರುಷ ಕೇಂದ್ರದ ಗೃಹಮಂತ್ರಿಯವರು ರಾಜ್ಯಗಳ ಮುಖ್ಯಮಂತ್ರಿಗಳವರಿಗೆ ಈ ಬಗ್ಗೆ ಬರೆದ ಪತ್ರದಿಂದ ಸರಕಾರಕ್ಕೆ ಸಮಸ್ಯೆಯ ಅರಿವಿತ್ತೆಂಬುದು ಸ್ಪಷ್ಟ. ಜನತಾ ಸರಕಾರವು ಪೋಲೀಸ್ ಕಮಿಷನ್ ಒಂದನ್ನು ರಚಿಸಿ, ಅದರ ವರದಿಯು ಬಂದು ಎಷ್ಟೋ ಕಾಲವಾದರೂ, ವರದಿಯಲ್ಲಿ ಸೂಚಿಸಿದ ಅಂಶಗಳನ್ನು ಕಾರ್ಯಗತಗೊಳಿಸುವುದರ ಬಗ್ಗೆ ಏನೂ ಮಾಡಿಲ್ಲ.

ಮೇಲಿನ ಅಂಶಗಳಲ್ಲದೆ, ರಾಜಕೀಯದ ಮಧ್ಯ ಪ್ರವೇಶ, ಆಳುವ ಪಕ್ಷಗಳ ಕಿರುಕುಳ, ಮೇಲಧಿಕಾರಿಗಳ ದರ್ಪ–ಇವೆಲ್ಲಾ ಅತೃಪ್ತಿಯನ್ನು ಹೆಚ್ಚಿಸಿವೆ. ಪೋಲೀಸ್ ಕಾನ್‌ಸ್ಟೇಬಲ್‌ಗಳು ಮೇಲಧಿಕಾರಿಗಳ ಬೂಟನ್ನು ಪಾಲಿಷ್ ಮಾಡುವುದರಿಂದ ಮೊದಲ್ಗೊಂಡು ಮನೆಗೆಲಸವನ್ನೂ ಮಾಡಬೇಕಾಗುವ ಪರಿಸ್ಥಿತಿಯಿದೆ.

ಈ ಎಲ್ಲಾ ಕಾರಣಗಳಿಂದಲೇ ದಿನಕ್ಕೆ ಎಂಟು ಗಂಟೆಯ ಕೆಲಸ, ವಾರದ ರಜಾದಿನ, ವೇತನದಲ್ಲಿ ಹೆಚ್ಚಳ, ವಸತಿ ಸೌಕರ್ಯ ಮತ್ತು ಇತರ ಸವಲತ್ತುಗಳ ಬೇಡಿಕೆಗಳನ್ನು ಮುಂದಿಟ್ಟು ಹೋರಾಟ ಪ್ರಾರಂಭವಾಗಿದೆ. ತಮಗೆ ಒಂದು ತಮ್ಮದೇ ಆದ ಸಂಘಟನೆ ಇದ್ದರೆ, ಬಹಳಷ್ಟು ಸಮಸ್ಯೆಗಳನ್ನು ಸಾಮೂಹಿಕವಾಗಿ ಮುಂದಿಟ್ಟು ಪರಿಹರಿಸಲು ಸಾಧ್ಯ ಎಂಬ ಅಭಿಪ್ರಾಯ ಪೋಲೀಸರಿಗೆ ಬರುವುದು ಸ್ವಾಭಾವಿಕ ಮತ್ತು ನ್ಯಾಯ ಸಮ್ಮತವಾಗಿದೆ. ತಾವು ಶಿಸ್ತು ಪರಿಪಾಲಕರಾಗಿರುವುದರಿಂದ ತಾವೇ ಶಿಸ್ತು ಮುರಿದು ಬೇಡಿಕೆಗಳಿಗಾಗಿ ಹೋರಾಡುವುದು ಸಾಧ್ಯವಿಲ್ಲ ಎಂಬ ವ್ಯವಸ್ಥೆಯೊಳಗಡೆ ಕೆಲಸ ಮಾಡಬೇಕಾಗಿದೆ ಪೋಲೀಸರು. ಇವರಿಗೆ ಸಂಘಟನಾ ಮತ್ತು ಹೋರಾಟದ ಹಕ್ಕುಗಳಿಲ್ಲದಿರುವುದರಿಂದ ಇವರ ಸಮಸ್ಯೆಗಳನ್ನು ಕೇಳುವವರೇ ಇಲ್ಲದಂತಾಗಿದೆ. ಡಿಪಾರ್ಟ್‌ಮೆಂಟಲ್ ತನಿಖಾ ಕ್ರಮದಿಂದ ನ್ಯಾಯ ದೊರೆಯುವುದಿಲ್ಲ ಎಂದು ಇವರಿಗೆ ಸ್ಪಷ್ಟವಾಗಿದೆ.

ಆದುದರಿಂದಲೇ ಸಂಘಟನಾ ಹಕ್ಕನ್ನು ಮುಂದಿಟ್ಟ ಪೋಲೀಸರ ಚಳುವಳಿಯು ಪ್ರಾರಂಭವಾಗಿದೆ. ಇದು ನ್ಯಾಯ ಸಮ್ಮತವಾಗಿದೆ ಮತ್ತು ಜನತೆಯ ಬೆಂಬಲ ದೊರೆತೇ ತೀರುವುದು. ಆದರೆ ಪೋಲೀಸರೂ ಒಂದಿಷ್ಟು ವಿಚಾರ ತಿಳಿದಿರಬೇಕು. ರಾಷ್ಟ್ರಕ್ಕೆ ಸ್ವಾತಂತ್ರ್ಯ ದೊರೆತು ಹಲವಾರು ವರ್ಷಗಳು ಸಂದರೂ, ಬ್ರಿಟಿಷರ ಕಾಲದ ಪೋಲೀಸ್ ಪದ್ಧತಿಯೇ ಇನ್ನೂ ಜಾರಿಯಲ್ಲಿದೆ. ಪೋಲೀಸರನ್ನು ಜನತೆಯ ರಕ್ಷಣೆ ಮತ್ತು ನ್ಯಾಯ ಪರಿಪಾಲನೆಗಾಗಿ ಉಪಯೋಗಿಸುವುದರ ಬದಲು, ಜನತೆಯ ವಿರೋಧವಾಗಿ ಉಪಯೋಗಿಸಲಾಗುತ್ತಿದೆ. ಈ ಪದ್ಧತಿಯು ಬದಲಾಗಬೇಕು. ಇದು ಬದಲಾಗುವಂತೆ ಮಾಡುವುದರಲ್ಲಿ ಪೋಲೀಸರದ್ದೂ ಪಾತ್ರವಿದೆ. ತಾವು ಆರ್ಥಿಕ ಮತ್ತು ಸಾಮಾಜಿಕವಾಗಿ ತುಳಿಯಲ್ಪಟ್ಟ ಜನತೆಯ ವಿಭಾಗಕ್ಕೆ ಸೇರಿದವರೆಂದೂ, ಸಮಾಜ ಪರಿವರ್ತನೆಯಲ್ಲಿ ತಮಗೂ ದೊಡ್ಡ ಜವಾಬ್ದಾರಿ ಇದೆ ಎಂದೂ ಅರಿತರೇನೇ ಪೋಲೀಸರ ನ್ಯಾಯವಾದ ಬೇಡಿಕೆ ಮತ್ತು ಹೋರಾಟಗಳಿಗೆ ಜನತೆಯ ಬೆಂಬಲ ದೊರೆಯುವುದು.

ಪೋಲೀಸರಿಗೆ ಸಂಘಟನೆ ಮಾಡುವ ಹಕ್ಕನ್ನು ಮಾನ್ಯತೆ ಮಾಡಿರುವ ಪಶ್ಚಿಮ ಬಂಗಾಲದ ಮತ್ತು ತ್ರಿಪುರಾ ರಾಜ್ಯಗಳ ಎಡಪಕ್ಷಗಳ ಸರಕಾರಗಳು ಉಳಿದ ರಾಜ್ಯಗಳಿಗೆ ಮಾರ್ಗದರ್ಶನವಿತ್ತಿವೆ. ಆದರೆ ಸಂಘಟನಾ ಹಕ್ಕು ದೊರೆತೊಡನೆಯೆ ಸಮಸ್ಯೆಗಳು ತೀರಲಾರವು. ಪೋಲೀಸರ ಕೆಲವೊಂದು ಅತ್ಯಾವಶ್ಯಕ ಬೇಡಿಕೆಗಳನ್ನು ಪೂರೈಸುವುದೂ, ಇವರು ಸಮಾಜ ಬದಲಾವಣೆಯಲ್ಲಿ ಒಂದು ಅಂಗವಾಗಿ ಬೆಳೆಯುವಂತೆ ಮಾಡುವುದರಿಂದಲೂ ಸಮಸ್ಯೆಯ ಪರಿಹಾರ ಸಾಧ್ಯ.

ಪೋಲೀಸರಿಂದ ಅನಗತ್ಯ ಲಾಠಿ ಪ್ರಹಾರ

ಬೆಂಗಳೂರು ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ದೊಡ್ಡಜಾಲದಲ್ಲಿರುವ ಡಬ್ಲ್ಯು. ಎಸ್. ಇನ್ಸುಲೇಟರ್ಸ್ ಕಾರ್ಖಾನೆಯಲ್ಲಿ ಹಲವುದಿನಗಳಿಂದ ಕಾರ್ಮಿಕರ ಮುಷ್ಕರ ನಡೆಯುತ್ತಿದೆ. 25-5-79 ರಂದು ಕಾರ್ಮಿಕರ ಸಭೆ ಸೇರಿದ್ದಾಗ ಪೋಲೀಸರು ಸೂಪರಿಂಟೆಂಡೆಂಟ್ ಆಫ್ ಪೋಲೀಸ್‌ರ ಸಮಕ್ಷಮದಲ್ಲಿಯೇ ಕೆಲಸಗಾರರ ಮೇಲೆ ಅಮಾನುಷವಾಗಿ ಅನಗತ್ಯ ಲಾಠಿ ಪ್ರಹಾರ ನಡೆಸಿದ್ದಾರೆ. ಹಲವು ಕೆಲಸಗಾರರಿಗೆ ಗಾಯಗಳಾಗಿವೆ. ಕಾರ್ಖಾನೆಯ ಎದುರಿನ ಬಸ್ ನಿಲ್ದಾಣದಲ್ಲಿ ನಿಂತಿದ್ದ ಹನುಮಂತಪ್ಪ ಎಂಬುವವರಿಗೂ ಗಾಯಗಳಾಗಿವೆ.

ಹಲವು ದಿನಗಳಿಂದ ಡಬ್ಲ್ಯು. ಎಸ್. ಇನ್ಸುಲೇಟರ್ಸ್‌ನ ಕೆಲಸಗಾರರು ಮುಷ್ಕರ ನಡೆಸುತ್ತಿದ್ದಾರೆ. ಕೆಲಸಗಾರರಿಗೆ ಆಹಾರವನ್ನು ತೆಗೆದುಕೊಂಡು ಹೋಗಲು ಪೋಲೀಸರು ಅನುಮತಿ ನೀಡುತ್ತಿಲ್ಲ. ಇದಕ್ಕೆ ಪ್ರಯತ್ನಿಸಿದ ಸಂಘದ ಕಾರ್ಯದರ್ಶಿಗಳಾದ ವಿ. ಪಿ. ಕುಲಕರ್ಣಿ ಮತ್ತು ಎ. ಎಂ. ಜಾನ್ ವಿನ್ಸೆಂಟ್ ಅವರನ್ನು ನಿಂತಲ್ಲೇ ಗುಂಡು ಹಾಕಿ ಸುಡುತ್ತೇವೆಂದು ಡಿ. ಎಸ್. ಪಿ. ಕೆ. ಜೆ. ಕುಲಕರ್ಣಿ ಅವರು ಬೆದರಿಸಿದರು. ಸಂಘದ ಅಧ್ಯಕ್ಷ ಮತ್ತು ಸಿ. ಐ. ಟಿ. ಯು. ನ ಕಾರ್ಯದರ್ಶಿ ವಿ. ಜೆ. ಕೆ. ನಾಯರ್ ಅವರು ಪೋಲೀಸ್ ಸೂಪರಿಂಟೆಂಡೆಂಟ್ ಅವರಿಗೆ ಟೆಲಿಫೋನ್ ಮಾಡಲು ಪ್ರಯತ್ನಿಸಿದರು. ಆದರೆ ಅವರು ಸಿಗಲಿಲ್ಲ. ನಾಯರ್ ಅವರು ದೊಡ್ಡಜಾಲಕ್ಕೆ ಹೋಗಿ ನಿಜವಾದ ಸಂಗತಿಗಳನ್ನು ತಿಳಿದು ಬಂದರು. ಅದರ ಪ್ರಕಾರ, ಲಾಕ್‌ಔಟ್ ಘೋಷಿಸದಿದ್ದರೂ ಕೆಲಸಗಾರರನ್ನು ಕಾರ್ಖಾನೆಯಿಂದ ದೈಹಿಕವಾಗಿ ಹೊರದೂಡಲಾಗಿದ್ದು, ಕಾರ್ಮಿಕರು ನಿರ್ಮಿಸಿದ್ದ ಟೆಂಟ್ ಅನ್ನು ಕಿತ್ತು ಪೋಲೀಸರು ನಾಲ್ಕು ಸಿ. ಐ. ಟಿ. ಯು. ಬಾವುಟಗಳನ್ನು ವಶಪಡಿಸಿಕೊಂಡಿದ್ದಾರೆ. ಕಾರ್ಖಾನೆಯ ಒಳಗಡೆ ಇದ್ದ ಪೋಲೀಸ್ ಸೂಪರಿಂಟೆಂಡೆಂಟ್ ಅವರನ್ನು ಭೇಟಿ ಮಾಡಲು ಕಾಂ. ನಾಯರ್ ಅವರಿಗೆ ಅವಕಾಶ ನೀಡಲಿಲ್ಲ. ಲಿಖಿತ ಮನವಿಯನ್ನೂ ಕೂಡ ದೊಡ್ಡಬಳ್ಳಾಪುರದ ಸಬ್‌ಇನ್ಸ್‌ಪೆಕ್ಟರ್ ಗೋವಿಂದರಾಜ್ ಅವರು ಹಿಂತಿರುಗಿಸಿರುವುದರಿಂದ ಅದನ್ನೇ 26-5-79ರಂದು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಅವರ ಮುಂದೆ ಹಾಜರಿಪಡಿಸಲಾಯಿತು.

ತಮ್ಮ ಲಾಭಗಳ ಆಸೆಗಾಗಿ ಆಡಳಿತವನ್ನು ಬೆಂಬಲಿಸಿ ಕಾರ್ಮಿಕರ ಮತ್ತು ಜನಸಾಮಾನ್ಯರ ಹಿತವನ್ನು ಕಡೆಗಣಿಸುವ ಪೋಲೀಸ್ ಸಿಬ್ಬಂದಿಯ ವರ್ತನೆ ಖಂಡನಾರ್ಹವಾಗಿದೆ.

ನಮ್ಮ ಸರ್ಕಾರ ಎತ್ತ ಸಾಗಿದೆ?

—ಎನ್. ಕೆ. ಉಪಾಧ್ಯಾಯ

ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಕಂಬದಹಳ್ಳಿ ಗ್ರಾಮದ ನಂಜಮ್ಮನೆಂಬ ಹರಿಜನ ವಿಧವೆ ಬಿ.ಜೆ.ಪಿ. ಯವರಿಗೊಂದು ಮನವಿಯನ್ನರ್ಪಿಸಿ ತನ್ನ ಹಳ್ಳಿಯ ಕೆಲವು ಪ್ರಮುಖರು ತಾನು ದುಡಿಯುತ್ತಿರುವ ಭೂಮಿಯ "ಕಾತೆ" ಪಡೆಯಲು ಅಡ್ಡಿ ಒಡ್ಡುತ್ತಿರುವುದಷ್ಟೇ ಅಲ್ಲ, ತನ್ನ ಆಸ್ತಿಯನ್ನು ಲೂಟಿ ಮಾಡಿ ತನ್ನ ಮಗಳ ಮಾನಹರಣ ಮಾಡಲು ಪ್ರಯತ್ನ ನಡೆಯುತ್ತಿದೆಂದೂ, ತನ್ನ ಸಂಕಷ್ಟ ದೂರ ಮಾಡದಿದ್ದರೆ ಮೇ 23 ರಿಂದ ಅನ್ನ ಸತ್ಯಾಗ್ರಹ ಹೂಡುವುದಾಗಿ ತಿಳಿಸಿದ್ದಾಳೆ.

ತನ್ನ ಹೊಲದ ಗಿಡಗಳನ್ನು ಕಡಿದುಕೊಂಡು ಹೋದ ಭೂಮಾಲಕರ ಮೇಲೆ ಪೋಲೀಸರು ಕ್ರಮ ತೆಗೆದುಕೊಂಡಿಲ್ಲ, ಭೂನ್ಯಾಯಮಂಡಲಿ ತನ್ನ ಅರ್ಜಿಯನ್ನು ನ್ಯಾಯಯುತವಾಗಿ ವಿಚಾರಮಾಡದೆ ಭೂಮಾಲಕರ ಪರ ನಿಲುಮೆ ತಳೆಯುತ್ತಿದೆಂದು ಆರೋಪ ಹೊರಿಸಿ ಮುಸಲ್ಮಾನ ಹೆಣ್ಣುಮಗಳು ಬಿಜಾಪುರದಲ್ಲಿ ಉಪವಾಸ ಕೈಗೊಂಡಿದ್ದಾಳೆ.

ಕರ್ನಾಟಕರಾಜ್ಯ ಸರ್ಕಾರಿ ನೌಕರದಾರರು ಹೆಚ್ಚಿನ ತುಟ್ಟಿಭತ್ತೆಗಾಗಿ 20 ದಿವಸದ ಸರದಿ ಉಪವಾಸ ಕೈಗೊಂಡಿದ್ದಾರೆ. ಕರ್ನಾಟಕ ರಾಜ್ಯದ ನಗರ ಸಭೆ ನೌಕರದಾರರೂ, ಪೌರಕಾರ್ಮಿಕರೂ ಕೂಡ ಮೇ 1ರಿಂದ 7 ದಿವಸ ಉಪವಾಸ ಸತ್ಯಾಗ್ರಹ ಹೂಡಿ ನಿವೃತ್ತಿ ವೇತನ ಮುಂತಾದ ಬೇಡಿಕೆಗಳಿಗಾಗಿ ಅನಿರ್ಧಿಷ್ಟಕಾಲದ ಮುಷ್ಕರ ಹೂಡುವ ನೋಟೀಸು ಕೊಟ್ಟಿದ್ದಾರೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ರೂ. 50ರಿಂದ ರೂ. 5000 ವರೆಗೆ ಪಂಪುಸೆಟ್ಟುಗಳ ಬಿಲ್ಲಿನ ಹಣ ಬೇಡುತ್ತಿದ್ದಾರೆಂದೂ, ಮೀಟರುಗಳ ತಪ್ಪಿನಿಂದಾಗಿಯೋ, ಮೀಟರ್ ನೋಡಿ ಬಿಲ್ಲು ತಯಾರಿಸುವವರ ತಪ್ಪಿನಿಂದಾಗಿಯೋ ಈ ರೀತಿ ಅರ್ಥವಿಲ್ಲದ ತಪ್ಪಾದ ಬಿಲ್ಲುಗಳನ್ನು ಕೊಟ್ಟು ಹಣ ವಸೂಲು ಮಾಡುವುದನ್ನು ತಡೆಹಿಡಿಯದಿದ್ದರೆ ಹೋರಾಟ ಮಾಡಬೇಕಾದೀತೆಂಬ ಎಚ್ಚರಿಕೆಯನ್ನು ಸಿರ್ಸಿ ತಾಲ್ಲೂಕಿನ ಪಂಪುಸೆಟ್ ಉಪಯೋಗಿಸುವವರು ಕೆ.ಇ.ಬಿ. ಅಧ್ಯಕ್ಷರಿಗೆ ಎಚ್ಚರಿಕೆ ನೀಡಿದ್ದಾರೆ.

ಪಂಪುಸೆಟ್ಟುಗಳ ವಿದ್ಯುಚ್ಛಕ್ತಿ ಬಳಸುವ ದರ ಇಳಿಯಬೇಕು, ನೀರಾವರಿ ಕರ್ನಾರಣೆ ಕಡಿಮೆಯಾಗಬೇಕು, ಬೆಳೆಗಳಿಗೆ ಯೋಗ್ಯ ಬೆಲೆ ಸಿಗಬೇಕೆಂಬ ಬೇಡಿಕೆಗಳಿಗಾಗಿ ಬಳ್ಳಾರಿ ಜಿಲ್ಲೆಯ ಕೃಷಕರು ಅನ್ನಸತ್ಯಾಗ್ರಹ ಹೂಡಿದ್ದಾರೆ.

ಬೆಂಗಳೂರಿನಲ್ಲಿ ರೈಲ್ವೆ ಹಮಾಲರು ಹೆಚ್ಚು ಹಮಾಲಿ ಬೇಡಿ ಮುಷ್ಕರ ಹೂಡಿರುವರು. ಮೌಲ್ಯಮಾಪನಕ್ಕೆ ಹೆಚ್ಚು ಹಣ ಬೇಕೆಂದು ಶಿಕ್ಷಕರ ಮುಷ್ಕರ ನಡೆದಿದೆ.

ಭಾರಿ ಬಿರುಗಾಳಿಯಿಂದಾಗಿ ಕರ್ನಾಟಕ ರಾಜ್ಯದ ಗುಲ್ಬರ್ಗ, ಬೀದರ, ರಾಯಚೂರು ಮತ್ತಿನ್ನಿತರ ಪ್ರದೇಶಗಳಲ್ಲಿ ಪ್ರಾಣ-ಆಸ್ತಿ ಹಾನಿಯಾಗಿ ಜನರು ಕಂಗಾಲಾಗಿರುವ ವರದಿಗಳು ಬರುತ್ತಿವೆ.

ಕರ್ನಾಟಕ ರಾಜ್ಯಾದ್ಯಂತ 3 ಲಕ್ಷ ಬೀಡಿ ಕಾರ್ಮಿಕರು ಸರಕಾರ ನಿರ್ಧರಿಸಿದ ಕನಿಷ್ಟ ವೇತನ ಸಿಗಬೇಕೆಂದು ಕೇಳಿ ಮುಷ್ಕರ ಹೂಡುತ್ತಿದ್ದಾರೆ.

ಈ ರೀತಿ ರಾಜ್ಯಾದ್ಯಂತ ಒಂದಲ್ಲೊಂದು ವರ್ಗದ ಜನತೆಯ ಹೋರಾಟ ದಿನನಿತ್ಯ ನಡೆಯುತ್ತಿದ್ದರೂ ಕೂಡ ಅದರ ಕಡೆ ಗಮನಕೊಡುವಷ್ಟು ಕಾಲಾವಕಾಶ ಮಂತ್ರಿಗಳಿಗಿಲ್ಲ.

ಬೆಂಗಳೂರು ನಗರ ಹಾಗೂ ರಾಜ್ಯಾದ್ಯಂತ ರಾಜ್ಯ ರಸ್ತೆ ಸಾರಿಗೆಯ ಸೇವೆ ಅತ್ಯಂತ ಅಸಮಾಧಾನಕಾರಕವಾಗಿದ್ದರೂ ತರುಣ ಸಾರಿಗೆ ಮಂತ್ರಿ ಅದರ ಕಡೆ ಗಮನಕೊಡುತ್ತಿಲ್ಲ. ಬೆಂಗಳೂರು ನಗರ ಹಾಗೂ ರಾಜ್ಯದ ಇತರ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ ಖಾಲಿ ಕೊಡಗಳ ಮೆರವಣಿಗೆ, ಬೊಬ್ಬಾಟ, ಚಳುವಳಿ ನಡೆಯುತ್ತಲೇ ಇದೆ. ಆದರೆ ಸಂಬಂಧಪಟ್ಟ-ಮಂತ್ರಿಯವರಿಗೆ ನಲ್ಲಿಯ ನೀರಿನ ಅವಶ್ಯಕತೆಯಿಲ್ಲ. ಕಾರಣ ಅತ್ತ ಗಮನಕೊಟ್ಟಿಲ್ಲ.

"ವಿಧಾನಸಭೆ-ವಿಧಾನಪರಿಷತ್ತುಗಳಲ್ಲಿ ಮಂತ್ರಿಗಳ ಗೈರುಹಾಜರಿ, ವಿರೋಧಿ ಪಕ್ಷದ ಪ್ರತಿಭಟನೆ, ಕೇಳಿದ ಪ್ರಶ್ನೆಗಳಿಗೆ ಉತ್ತರವಿಲ್ಲ". ಪ್ರತಿ ದಿನ ವರ್ತಮಾನ ಪತ್ರಿಕೆಗಳಲ್ಲಿ ಬರುವ ಸುದ್ದಿಗಳಿವು.

ಮುಖ್ಯಮಂತ್ರಿ ದೇವರಾಜ ಅರಸು ವರ್ಷದಲ್ಲಿ 150 ದಿವಸ ರಾಜ್ಯ ಬಿಟ್ಟು ದಿಲ್ಲಿ-ಮುಂಬಯಿ-ಹೈದರಾಬಾದ್ ಮುಂತಾದ ಕಡೆಗಳಲ್ಲಿ ತನ್ನ ಹಾಗೂ ತನ್ನ ಪಕ್ಷದ ರಾಜಕಾರಣದ ಗೊಂದಲದಲ್ಲಿ ಸಂಚಾರ ಮಾಡುತ್ತಿರುತ್ತಾರೆ. ಯಾವಾಗಾದರೊಮ್ಮೆ ವಿಧಾನಸಭೆ-ವಿಧಾನಪರಿಷತ್ತಿನಲ್ಲಿ ಹಾಜರಿದ್ದಾಗ ಕೇಳುವ ಪ್ರಶ್ನೆಗಳಿಗೆ ಅವರು ಹೇಳುವ ಸರ್ವಸಾಮಾನ್ಯ ರೂಢಿಯ ಉತ್ತರವೇನೆಂದರೆ "ವಿಚಾರ ಮಾಡೋಣ" "ನೋಡೋಣ" ಇದಕ್ಕಿಂತ ಹೆಚ್ಚಿನ ಉತ್ತರ ಕೊಡುವ ಗೊಡವೆಗೆ ಅರಸರು ಹೋಗುವುದಿಲ್ಲ. ಕ್ಯಾಬಿನೆಟ್-ರಾಜ್ಯ ಮಂತ್ರಿಗಳ ಪರಿಸ್ಥಿತಿಯೂ ಹೇಳತೀರದಷ್ಟು ಹೀನಾಯಮಾನ. ತಮಗೊಪ್ಪಿಸಿದ ವಿಷಯದ ಕುರಿತು ಸ್ವತಂತ್ರ ನಿಲುಮೆ ತಾಳುವ, ನಿರ್ಣಯ ತೆಗೆದುಕೊಳ್ಳುವ ಅಧಿಕಾರ ಯಾವೊಬ್ಬ ಮಂತ್ರಿಗೂ ಇಲ್ಲ. ಅರಸರು "ಹೂಂ" ಅಂದರೆ ಮಾತ್ರ ಮಂತ್ರಿಗಳ ಪೆನ್ನು ಬಿಳಿಯಹಾಳೆ ಮೇಲೆ ಓಡಾಡುತ್ತದೆ-ನಾಲಗೆ ಸಂದಾಡುತ್ತದೆ. ಇಲ್ಲದಿದ್ದರೆ, "ಒಣಗಿದ ಬಾವಿಯಂತೆ" ಅವರ ಪರಿಸ್ಥಿತಿ. ಲೋಕೋಪಯೋಗಿ ಮಂತ್ರಿ ಬಂಗಾರಪ್ಪನವರೊಬ್ಬರು, ಕಂದಾಯ ಮಂತ್ರಿ ಬಸವಲಿಂಗಪ್ಪನವರು ಇದಕ್ಕೆ ಅಪವಾದವಿದ್ದಂತೆ ಕಂಡು ಬರುತ್ತದೆ.

ಸಂಸ್ಥಾನವಿದ್ದಾಗಲೂ, ಕರ್ನಾಟಕ ರಾಜ್ಯ ರಚನೆಯಾದ ನಂತರವೂ, ಇಂದಿಗೂ ನಮ್ಮ ರಾಜ್ಯದಲ್ಲಿ ಜಾತಿ ಗುಂಪಿನಾಧಾರದಲ್ಲಿ ಆಡಳಿತ ನಡೆದು ಬಂದಿದೆ. ಹನುಮಂತಯ್ಯನವರ ಆಡಳಿತೆ ಒಕ್ಕಲಿಗರ ಪ್ರಭಾವಿತವಿದ್ದಂತೆಯೇ ನಿಜಲಿಂಗಪ್ಪನವರದು ಲಿಂಗಾಯತ ಬಹುಮತದ್ದಾಗಿತ್ತು. ನಿಜಲಿಂಗಪ್ಪನವರ ಕಾಲ ಘಟ್ಟದಲ್ಲಿ ಚಿತ್ರದುರ್ಗದ 2 ಪ್ರಭಾವಿತ ಮಠಾಧೀಶರು ಕರ್ನಾಟಕದ ರಾಜಕೀಯದಲ್ಲಿ ಪ್ರವೇಶಿಸಿದಕಾರಣವಾಗಿ ಸಿರಿಗೆರೆ ಮಠಾದೀಶರ ಪ್ರಭಾವ-ಹಣ ಬಿ. ಡಿ. ಜತ್ತಿಯವರ ಪರವಾಗಿದ್ದು, ನಿಜಲಿಂಗಪ್ಪ-ಜತ್ತಿ ಗುಂಪುಗಳು ಕರ್ನಾಟಕ ರಾಜಕೀಯದಲ್ಲಿ ಬಹುಕಾಲ ಮೆರೆದವು. 1969 ರಲ್ಲಿ ಕಾಂಗ್ರೆಸ್ ಇಬ್ಭಾಗವಾಗಿ ನಿಜಲಿಂಗಪ್ಪನವರು ಇಂದಿರಾಗಾಂಧಿಯಿಂದ ದೂರ ಸರಿದಾಗ, 1972ರ ಚುನಾವಣೆ ತರುವಾಯ ಜತ್ತಿಯವರನ್ನು ಕರ್ನಾಟಕ ರಾಜ್ಯದ ರಾಜಕೀಯದಿಂದ ದೂರವಿಡುವ ಉದ್ದೇಶದಿಂದ ಇಂದಿರಾಗಾಂಧಿ ಜತ್ತಿಯವರನ್ನು ಪಾಂಡಿಚೇರಿಯ ಲೆ. ಗವರ್ನರರನ್ನಾಗಿಮಾಡಿ, ಒರಿಸ್ಸಾದ ಗವರ್ನರರನ್ನಾಗಿಯೂ, ಉಪರಾಷ್ಟ್ರಪತಿಯನ್ನಾಗಿಯೂ ಮಾಡಿದರು. ಬಣಜಿಗ (ವ್ಯಾಪಾರಿ) ವೃತ್ತಿಯ ಜತ್ತಿಯವರು ದೂರವಿದ್ದು ಕರ್ನಾಟಕದ ರಾಜಕಾರಣದಲ್ಲಿ ಆಸ್ತೆ ಬಿಡದೆ, ತಮ್ಮ ಗುಂಪಿಗೆ ಪ್ರೋತ್ಸಾಹ ಸಲಹೆ ಕೊಡುತ್ತಿದ್ದರೂ ಕೂಡ ದೇವರಾಜ ಅರಸರ ಚಾಣಾಕ್ಷ ರಾಜಕಾರಣದ ಮುಂದೆ ಜತ್ತಿಯವರ ಆಟ ನಡೆಯದಂತಾದಾಗ, ಅವರು ಬಸವಣ್ಣನವರ ಪಟ್ಟದ ಶಿಷ್ಯರಾಗಿ ಮೆರೆಯಲು ಪ್ರಾರಂಭಿಸಿದರು. ದೇವರಾಜರ ಅರಸುತನ ನಿರಾತಂಕವಾಗಿ ಮೆರೆಯಿತು. ಲಿಂಗಾಯತ ಗುಂಪಿಗೆ ಅರಸು ತಲೆನೋವಾಗುತ್ತಿದ್ದಂತೆಯೇ, ಅವರ ಮಂತ್ರಿಮಂಡಲದಲ್ಲಿದ್ದ ಕೆ. ಎಚ್. ಪಾಟೀಲರಿಗೆ, ಹೆಚ್ಚಿನ ಮಹತ್ವ ಬರಹತ್ತಿತು.

ತುರ್ತುಪರಿಸ್ಥಿತಿಯಲ್ಲಿ ಇಂದಿರಾಗಾಂಧಿಗೆ ಅರಸು ಮೇಲೆ ಹೆಚ್ಚಿಗೆ ವಿಶ್ವಾಸ ಇರಲಿಲ್ಲ. ಅರಸು ವಿರುದ್ಧ ಗುಂಪಿನ ಕೆ. ಎಚ್. ಪಾಟೀಲರು ಸಂಜಯಗಾಂಧಿಯ ವಿಶ್ವಾಸಪಾತ್ರರಾಗಿದ್ದರು. ಹೆಚ್ಚು ವಿಶ್ವಾಸಗಳಿಸುವ ಪೈಪೋಟಿಯಲ್ಲಿ ಅರಸರೇ ಗೆದ್ದು, 1978ರಲ್ಲಿ ಇಂದಿರಾಗಾಂಧಿ ಕಾಂಗ್ರೆಸ್ಸನ್ನು ಎರಡನೇ ಸಲ ಒಡೆದಾಗ ಕರ್ನಾಟಕದಲ್ಲಿ ಇಂದಿರಾ ಕಾಂಗ್ರೆಸ್ಸಿನ ಹೊರೆಯನ್ನು ಅರಸರೇ ಹೊತ್ತು ಕೆ. ಎಚ್. ಪಾಟೀಲರು ಬರೇ ಕಾಂಗ್ರೆಸ್ ಆಗಿ ಉಳಿದರು.

ಹರಿಜನ-ಗಿರಿಜನರ ಉದ್ಧಾರಕರೆಂದು ಘೋಷಿಸುತ್ತ, ಹಳ್ಳಿ ಪ್ರದೇಶದಲ್ಲಿ ಇಂದಿರಾಗಾಂಧಿಯ ಹೆಸರಿನ ಪ್ರಚಾರದ ಲಾಭ ಪಡೆದು ನಮ್ಮ ರಾಜ್ಯದಲ್ಲಿ ಪ್ರಬಲಶಕ್ತಿಯಾಗಿ ಬೆಳೆದಿರುವ ಅರಸರು ಇಂದಿರಾಗಾಂಧಿಯ ಸರ್ವಾಧಿಕಾರತ್ವದ, ಕುತಂತ್ರದ ಸಂಪೂರ್ಣ ತಿಳುವಳಿಕೆ ಉಳ್ಳವರಾಗಿದ್ದು, ಸಂದಿಗ್ಧ ಪರಿಸ್ಥಿತಿ ಬಂದಾಗ ಇಂದಿರಾಳನ್ನು ಬಿಟ್ಟು ಕರ್ನಾಟಕದಲ್ಲೂ ಮಹಾರಾಷ್ಟ್ರದ ಶರದ ಪವಾರನ ಪಾತ್ರಧಾರಿಗಳಾಗಲು ಹಿಂಜರಿಯುವುದಿಲ್ಲೆಂಬ ಸಂಗತಿ ಇತ್ತೀಚೆಗಿನ ಅವರ ಭಾಷಣ, ನಡಾವಳಿಗಳಿಂದ ಸ್ಪಷ್ಟವಾಗುತ್ತಿದೆ.

ಒಂದು ಸಲ ಕಾಂಗ್ರೆಸ್ ಐಕ್ಯತೆಯ ಹೆಸರಲ್ಲಿ ಅಖಿಲ ಭಾರತ ಮಟ್ಟದ ಮುಖಂಡತ್ವ ವಹಿಸಲು ಶತಪ್ರಯತ್ನ ಮಾಡಿ ಇಂದಿರಾಗಾಂಧಿಯ ಕುತಂತ್ರದಿಂದ ಸೋಲನ್ನಪ್ಪಿ, ಈಗ ನಮ್ಮ ರಾಜ್ಯದಲ್ಲಿ ತನ್ನ ವಿರುದ್ಧ ಗುಂಡೂರಾವ್-ಬಸವಲಿಂಗಪ್ಪ ಮಹಮ್ಮದ ಶರೀಫರಂಥವರನ್ನು ಎತ್ತಿಕಟ್ಟುವ ಪ್ರಯತ್ನ ನಡೆಯುತ್ತಿರುವಾಗ, ಅವರಿಗೆಲ್ಲ ಬುದ್ಧಿ ಕಲಿಸುವ ಉದ್ದೇಶದಿಂದಲೇ ಇನ್ನು ಕೆಲವೇ ತಿಂಗಳಲ್ಲಿ ಜಿಲ್ಲೆಗೊಬ್ಬ ಮಂತ್ರಿ ನೇಮಿಸಲಾಗುವುದೆಂದು ಸಾರಿ ಮಕ್ಕಳಿಗೆ ಚಾಕಲೇಟ್ ಆಸೆ ತೋರಿಸಿದಂತೆ ಎಂ. ಎಲ್. ಎ. ಗಳೆಲ್ಲ ಮಂತ್ರಿ ಪದವಿಯ ಆಸೆಯಿಂದ ತಮ್ಮನ್ನಗಲಿ ಹೋಗಬಾರದಂತೆ "ಬಂದೋ ಬಸ್ತ್" ಮಾಡಿದ್ದಾರೆ ಅರಸರು.

ಹೀಗೆ ಇತ್ತೀಚಿನ ಎರಡು ವರ್ಷಗಳಲ್ಲಿ ರಾಜಕೀಯ ಚದುರಂಗದಾಟದಲ್ಲೇ ಮಗ್ನರಾಗಿರುವ, ಸರಕಾರದ-ಮಂತ್ರಿಗಳ ಸರ್ವ ಅಧಿಕಾರವನ್ನೂ ತನ್ನ ಹಿಡಿತದಲ್ಲಿಟ್ಟುಕೊಂಡಿರುವ ದೇವರಾಜ ಅರಸರಿಗೆ ಎರಡುವರೆ ಕೋಟಿ ಕನ್ನಡ ಪ್ರಜೆಗಳ ದೈನಂದಿನ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಸಾಧ್ಯವೇ? ಎಂದಿಗೂ ಸಾಧ್ಯವಿಲ್ಲ. ಹಿಂದಿನ ಸರ್ವಾಧಿಕಾರಿಗಳು ಜನರಲ್ಲಿ ಭ್ರಮೆ ಹುಟ್ಟಿಸಲು ಯಾವ ರೀತಿ ಸುಳ್ಳು ಪ್ರಚಾರ ಮಾಡುತ್ತಿದ್ದರೋ ದೇವರಾಜ ಅರಸರು ಕೂಡ ಅದೇ ರೀತಿ ಎಲ್ಲಾ ವರ್ಗದ ಜನರಿಗೆ ಸಮಾಧಾನವಾಗುವ ರೀತಿಯಲ್ಲಿ "ಮಾಡೋಣ" "ನೋಡೋಣ" ಎಂಬೆರಡು ಮಂತ್ರಗಳನ್ನುಚ್ಚರಿಸಿಬಿಡುವ ತಂತ್ರವನ್ನುಪಯೋಗಿಸಿ ಯಶಸ್ವಿಯಾಗಿದ್ದಾರೆ.

ಬೇರೆ ಬೇರೆ ವರ್ಗದ ಜನ ಪ್ರತ್ಯೇಕವಾಗಿಯೇ ತಂತಮ್ಮ ಬೇಡಿಕೆಗಳ ಸಲುವಾಗಿ ಹೋರಾಟ ಮಾಡುತ್ತಲೇ ಇದ್ದಾರೆ. ಈ ಹೋರಾಟಗಳೆಲ್ಲ ಪ್ರತ್ಯೇಕವಾಗಿಯೇ ನಡೆಯುತ್ತಿರುವುದರಿಂದ ಸರಕಾರ ಸುಳ್ಳು ಹೇಳಿ ಅವುಗಳನ್ನು ನಿಷ್ಕ್ರಿಯಗೊಳಿಸುತ್ತದೆ. ಆದ್ದರಿಂದ ಕುಡಿಯುವ ನೀರಿನ ಕುರಿತಾಗಲೀ, ಬಸ್ಸುದರ ಏರಿಕೆಯ ವಿಷಯವಾಗಲೀ ಅಥವಾ ರೈತರ-ಕಾರ್ಮಿಕರ, ವಿದ್ಯಾರ್ಥಿಗಳ, ಶಿಕ್ಷಕರ, ಸರಕಾರಿ ನೌಕರದಾರರ ಸಮಸ್ಯೆಗಳಾಗಲೀ ಪರಿಹಾರ ಕಾಣದೆ ನೆನೆಗುದಿಗೆ ಬೀಳುವಂತಾಗಿದೆ. ವಿಧಾನಸಭೆ-ವಿಧಾನ ಪರಿಷತ್ತಿನಲ್ಲಿ ಕೂಡ, ಜನತಾ, ಕಮ್ಯುನಿಸ್ಟ್ ಪಾರ್ಟಿಗಳು ಪರಿಣಾಮಕಾರವಾಗಿ, ಪ್ರಭಾವಿತವಾಗಿ ವರ್ತಿಸುತ್ತಿಲ್ಲ. ಜನತೆಯ, ಸಂಘಟಿತ ರೈತ-ಕಾರ್ಮಿಕರ, ಯುವಜನತೆಯ ಹಾಗೂ ವಿರೋಧಿಪಕ್ಷಗಳ ನಿಷ್ಕ್ರಿಯತೆ ಆಳುವ ಪಕ್ಷದಲ್ಲಿ, ಮುಖ್ಯವಾಗಿ ದೇವರಾಜ ಅರಸರಲ್ಲಿ ಹೆಚ್ಚಿನ ಧೈರ್ಯ ತುಂಬಿದೆ. ಜನರು ಸಾವಿರಾರು ಸಮಸ್ಯೆಗಳನ್ನೆದುರಿಸುತ್ತಿದ್ದರೂ, ಅವುಗಳ ಪರಿಹಾರಕ್ಕಾಗಿ ಐಕ್ಯತೆಯ ಹೋರಾಟ ನಡೆಸಬೇಕೆಂಬ ತಿಳುವಳಿಕೆಯ ಅಭಾವವಿರುವುದು ಪ್ರಜಾಪ್ರಭುತ್ವಕ್ಕೆ ಅಪಾಯವೆಂಬುದನ್ನು ಅರಿತುಕೊಳ್ಳಬೇಕು. ಜನರಲ್ಲಿರುವ ನಿಷ್ಕ್ರಿಯತೆಯನ್ನು ಕಿಗೆದುಹಾಕಿ, ಅವರಲ್ಲಿ ರಾಜಕೀಯ ಜಾಗೃತಿಯನ್ನುಂಟು ಮಾಡಿ, ಸಮಸ್ಯೆಗಳ ಪರಿಹಾರಕ್ಕೂ, ಪ್ರಜಾಪ್ರಭುತ್ವ ರಕ್ಷಣೆಗೂ, ಸರ್ವಾಧಿಕಾರದ ಸೋಲಿಗೂ, ಅಣಿಗೊಳಿಸುವ ಗುರುತರ ಜವಾಬ್ದಾರಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಸಿ. ಐ. ಟಿ. ಯು., ರೈತ ಸಂಘ, ವಿದ್ಯಾರ್ಥಿ ಫೆಡರೇಶನ್, ಯುವಕ ಸಂಘ ಹಾಗೂ ಇತರ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮೇಲಿದೆ. ಚಾರಿತ್ರಿಕವಾದ ಈ ಜವಾಬ್ದಾರಿಯನ್ನು ನಿರ್ವಹಿಸಲು ಪ್ರಾಮುಖ್ಯವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಅದರ ಕಾರ್ಯಕರ್ತರು ಮುಂದೆ ಬರಬೇಕು. ಹಾಗಾದರೇನೇ ಜನರಲ್ಲಿ ಹೊಸ ಚೈತನ್ಯ ತುಂಬಲು ಸಾಧ್ಯ. ನಮ್ಮ ಕರ್ತವ್ಯ ಪೂರೈಸಲು ಸಾಧ್ಯ. ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಸಾಧ್ಯ.

●

ಚಿರಸ್ಮರಣೆ

ದೇಜಮ್ಮ, ಮೂಲ್ದಡ್ಕ, ಉಜಿರೆ

2-6-1978, ನೀವು ನಮ್ಮನ್ನಗಲಿ 2-6-1979
ಇಂದಿಗೆ ಒಂದು ವರ್ಷವಾಯಿತು
ನಿಮ್ಮ ಆದರ್ಶವೇ ನಮ್ಮ ದಾರಿದೀಪ

ಮಕ್ಕಳು, ಮೊಮ್ಮಕ್ಕಳು,
ಬಂಧುಗಳು.

ಎ. ಎಂ. ರಾಮಣ್ಣ (ಯಾನೆ) ಹೋಟೆಲ್ ರಾಮರಾವ್
ಬೆಂಗಳೂರು.

ಪ. ಬಂಗಾಳದ ಪಂಚಾಯತ್‌ಗಳ ಸಫಲತೆ

ಮೂಲನೆಲೆಗಳಲ್ಲಿ ಹೊಸ ನಾಯಕತ್ವ

ಎಂಟು ತಿಂಗಳಿಂದ ಮೂರು ಹಂತಗಳ ಚುನಾಯಿತ ಪಂಚಾಯತಿ ವ್ಯವಸ್ಥೆ ಪಶ್ಚಿಮ ಬಂಗಾಳದಲ್ಲಿ ಕೆಲಸ ಮಾಡುತ್ತಿದೆ. ಗ್ರಾಮೀಣ ಆಡಳಿತದ ಸ್ವರೂಪದ ಬಗ್ಗೆ ವಾಮರಂಗ ಸರ್ಕಾರವು ನಡೆಸಿದ ಈ ಪ್ರಯೋಗವು ಇದುವರೆಗೆ ಸಫಲವಾಗಿದೆ.

ಗ್ರಾಮೀಣ ಬಂಗಾಳದ ಆಡಳಿತ ಮತ್ತು ಅಭಿವೃದ್ಧಿ ಕೆಲಸಗಳಿಗೆ ಒಂದು ವಿಕೇಂದ್ರೀಕೃತ ಸ್ವರೂಪವನ್ನು ನೀಡುವ ಪ್ರಯತ್ನವಾಗಿ ಪಂಚಾಯತಿ ಚುನಾವಣೆಗಳು ನಡೆದವು. ಆದರೆ ಕಳೆದ ಸೆಪ್ಟೆಂಬರ್‌ನಲ್ಲಿ ಪಂಚಾಯತಿಗಳು ತಮ್ಮನ್ನು ತಾವು ವ್ಯವಸ್ಥೆ ಮಾಡಿಕೊಳ್ಳುವುದರೊಳಗೆ ರಾಜ್ಯದ ಹನ್ನೆರಡು ಜಿಲ್ಲೆಗಳು ವಿನಾಶಕಾರಿ ಪ್ರವಾಹದಲ್ಲಿ ಪೆಟ್ಟು ತಿಂದವು. ಗ್ರಾಮ ಪಂಚಾಯತಿ, ಪಂಚಾಯತಿ ಸಮಿತಿ (ಬ್ಲಾಕ್‌ಮಟ್ಟ) ಮತ್ತು ಜಿಲ್ಲಾ ಪರಿಷತ್ (ಜಿಲ್ಲಾ ಮಟ್ಟ)–ಈ ರೀತಿ ಮೂರು ಹಂತಗಳ ಹೊಸದಾಗಿ ಆಯ್ಕೆಗೊಂಡ ಪಂಚಾಯತಿಗಳ ಸದಸ್ಯರ ಶಕ್ತಿ ಎಲ್ಲವೂ ಪುನರ್ರಚನೆ ಕಾರ್ಯಕ್ಕೆ ವಿನಿಯೋಗವಾಗಿ ಅವರು ಅದರಲ್ಲಿ ಸಾಫಲ್ಯವನ್ನು ಪಡೆದರು. ಪಂಚಾಯತಿ ಕಾರ್ಯದೊಡನೆ ಸಂಬಂಧ ಹೊಂದಿರುವ ಪಕ್ಷೇತರ ಸರ್ಕಾರಿ ಅಧಿಕಾರಿಗಳ ಒಟ್ಟು ಅಭಿಪ್ರಾಯ ಇದು.

1978ರ ಜೂನ್‌ನಲ್ಲಿ ಪಂಚಾಯತಿ ಚುನಾವಣೆಗಳನ್ನು ನಡೆಸಲಾಯಿತು. 30,000 ಕ್ಷೇತ್ರಗಳಲ್ಲಿ, 56,000 ಪಂಚಾಯತಿ ಪ್ರತಿನಿಧಿಗಳನ್ನು ಚುನಾಯಿಸಲು 25 ಮಿಲಿಯ ಮತದಾರರು ಮತ ಚಲಾಯಿಸಿದರು. ಫೆಬ್ರುವರಿ ಒಂದರವರೆಗೆ (1979) 32,011 ಗ್ರಾಮಪಂಚಾಯತಿಗಳು 324 ಪಂಚಾಯತಿ ಸಮಿತಿಗಳು ಮತ್ತು 15 ಜಿಲ್ಲಾ ಪರಿಷತ್‌ಗಳು ಕಾರ್ಯನಿರ್ವಹಿಸುತ್ತಿದ್ದವು. "ಅಧಿಕಾರದ ಪ್ರಜಾಪ್ರಭುತ್ವವಾದಿ ವಿಕೇಂದ್ರೀಕರಣದ ಸಾಧನಗಳ"ನ್ನಾಗಿ ಈ ಪಂಚಾಯತಿಗಳನ್ನು ಬೆಳೆಸುವುದೇ ಈ ವ್ಯವಸ್ಥೆಯ ಸ್ಥಾಪನೆಯ ಮುಖ್ಯೋದ್ದೇಶವಾಗಿತ್ತು.

ಜವಾಬ್ದಾರಿಯ ವರ್ಗಾವಣೆ:

ಈ ಸಾಧ್ಯತೆಯನ್ನು ಮತ್ತಷ್ಟು ಪರಿಶೀಲಿಸಲು, ಸಹಾಯಕ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಮೂವರು ಸದಸ್ಯರ ಸಮಿತಿಯನ್ನು ಸರ್ಕಾರ ನೇಮಿಸಿತು. ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಜವಾಬ್ದಾರಿಯನ್ನು ಕಲ್ಕತ್ತದಿಂದ ಪಂಚಾಯತುಗಳಿಗೆ ವರ್ಗಾಯಿಸುವುದರ ಬಗ್ಗೆ ಈ ಸಮಿತಿಯು ಮಾಡುವ ಶಿಫಾರಸುಗಳನ್ನು ರಾಜ್ಯ ಮಂತ್ರಿಮಂಡಲವು ಈಗ ಪರಿಶೀಲಿಸುತ್ತಿದೆ. ಅಲ್ಲದೆ, ಮುಖ್ಯಮಂತ್ರಿಯವರ ನೇತೃತ್ವದ ಒಂದು ಕ್ಯಾಬಿನೆಟ್ ಉಪಸಮಿತಿಯು ಪಂಚಾಯತುಗಳ ನೀತಿನಿಯಮ ವಿಚಾರಗಳನ್ನು ನೋಡಿಕೊಳ್ಳುತ್ತದೆಯಲ್ಲದೆ, ಕಾರ್ಯಕ್ರಮಗಳ ಉತ್ತಮ ಜಾರಿಗಾಗಿ ವಿವಿಧ ರಾಜ್ಯ ಇಲಾಖೆಗಳ ನಡುವೆ ಸಮನ್ವಯವನ್ನು ಸ್ಥಾಪಿಸುವುದರಲ್ಲೂ ನೆರವಾಗುತ್ತದೆ.

ಈ ಪಂಚಾಯತುಗಳ ಕಾರ್ಯಸಾಮರ್ಥ್ಯದ ಮಟ್ಟದ ಬಗ್ಗೆ ಪಂಚಾಯತಿ ಕೆಲಸಕ್ಕೆ ಸಂಬಂಧಿಸಿದ ಎಲ್ಲ ಅಧಿಕಾರಿಗಳಿಗೂ ಏಕಾಭಿಪ್ರಾಯವಿದೆ. ಜಿಲ್ಲೆಗಳಲ್ಲಿ ವರ್ಷಗಳಿಂದಲೂ ಅನೇಕ ಪ್ರವಾಹಸಂಕಷ್ಟಗಳು ಬರುತ್ತಿದ್ದು, ಪ್ರತಿ ಭೀಕರ ಪ್ರವಾಹದ ನಂತರ ಕಲ್ಕತ್ತ ಮತ್ತು ಇತರ ನಗರಗಳಿಗೆ ಗ್ರಾಮೀಣ ನಿರಾಶ್ರಿತರು ವಲಸೆ ಬರುವುದು ಈ ರಾಜ್ಯದ ಸಂಪ್ರದಾಯವಾಗಿತ್ತು.

ಆದರೆ, ರಾಜ್ಯದ ನೆನಪಿನಲ್ಲೇ ಭೀಕರವಾದ ಕಳೆದ 1978ರ ಪ್ರವಾಹ ಬಂದ ನಂತರ ಈ ರೀತಿ ಆಗಲಿಲ್ಲ. ವಲಸೆ ಬರುವುದು ತೀರ ಕಡಿಮೆಯಾಯಿತಷ್ಟೇ ಅಲ್ಲ, ಕಲ್ಕತ್ತ ಅಥವಾ ಪ. ಬಂಗಾಳದ ಯಾವುದೇ ನಗರಕ್ಕೂ ಈ ವಲಸೆ ಬರಲಿಲ್ಲ.

ಪಂಚಾಯತುಗಳ ಸಾಧಿಸಿರುವ ಗಮನಾರ್ಹ ಸಾಧನೆ ಇದೆಂದು ಅಧಿಕಾರಿಗಳು ಭಾವಿಸುತ್ತಾರೆ. ಪ್ರವಾಹಗಳ ನಂತರ ಪುನರ್ರಚನೆ ಮತ್ತು ಅಭಿವೃದ್ಧಿಯ ಕೆಲಸವನ್ನು ಈ ಮೂರು ಹಂತಗಳ ವ್ಯವಸ್ಥೆಗೆ ಒಪ್ಪಿಸಲಾಗಿತ್ತು. ಅವರು ಸಾಕಷ್ಟು ಕೆಲಸಗಳನ್ನು ಸೃಷ್ಟಿಸಿ, ಆಹಾರವನ್ನು ಒದಗಿಸಿದ್ದರಿಂದ, ನೊಂದವರಿಗೆ ಪರಿಹಾರ ಸಾಕಷ್ಟು ನೀಡಿದ್ದರಿಂದ, ಅವರು ತೃಪ್ತರಾಗಿ ಹಳ್ಳಿಗಳಲ್ಲೇ ಉಳಿದು, ಕೆಲಸ ಅಥವಾ ಆಹಾರಬೇಡಲು ನಗರಗಳಿಗೆ ಬರಲಿಲ್ಲ.

ದುಡಿಮೆಗೆ ಆಹಾರ ಕಾರ್ಯಕ್ರಮ:

ಪ್ರವಾಹ ಇರಲಿ ಇಲ್ಲದಿರಲಿ ನವೆಂಬರ್ ವೇಳೆಗೆ ವಲಸೆ ನಡೆಯುತ್ತಲೇ ಇತ್ತು. ಹಳ್ಳಿಗಳಲ್ಲಿ ಈ ಅವಧಿಯಲ್ಲಿ ಕೆಲಸಗಳು ಇಲ್ಲದಿರುವುದು ಸಂಪ್ರದಾಯವಾಗಿತ್ತು. ಪ್ರವಾಹಗಳಿದ್ದೂ 1978ರಲ್ಲಿ ಈ ಅವಧಿಯ ವಲಸೆ ನಡೆಯಲಿಲ್ಲ. ಪಂಚಾಯತುಗಳ ಮೂಲಕ ನಡೆಸಿದ ದುಡಿಮೆಗೆ ಆಹಾರ ಕಾರ್ಯಕ್ರಮ, ಗ್ರಾಮೀಣ ಕೆಲಸಗಳ ಕಾರ್ಯಕ್ರಮ ಮತ್ತು ಗ್ರಾಮೀಣ ಪುನರ್ರಚನೆ ಕಾರ್ಯಕ್ರಮಗಳೇ ಇದಕ್ಕೆ ಕಾರಣ ಎಂದು ಅಧಿಕಾರಿಗಳು ಭಾವಿಸಿದ್ದಾರೆ.

•

ಗ್ರಾಮೀಣ ಕೆಲಸಗಳ ಕಾರ್ಯಕ್ರಮವೊಂದರಲ್ಲೇ, ಪಂಚಾಯತುಗಳು ಹಣ ಮತ್ತು ಆಹಾರ ಧಾನ್ಯಗಳ ರೂಪದಲ್ಲಿ 16 ಕೋಟಿರೂಪಾಯಿಗಳ ವೆಚ್ಚ ನಡೆಸಿದವು. ಪಂಚಾಯತುಗಳ ಅನೇಕ ಸದಸ್ಯರಿಗೆ ದೊಡ್ಡ ಮೊತ್ತ ಹಣ ನಿರ್ವಹಣೆಯ ಅನುಭವವೇ ಇರಲಿಲ್ಲ. ಹಣ ಮತ್ತು ಸಂಪನ್ಮೂಲ ನಿರ್ವಹಣೆಯ ಬಗ್ಗೆ ಪಂಚಾಯತು ಸದಸ್ಯರಿಗೆ ತರಬೇತಿ ನೀಡಲು ರಾಜ್ಯಸರ್ಕಾರವು ಎರಡು ತರಬೇತಿ ಶಿಬಿರಗಳನ್ನು ಏರ್ಪಡಿಸಿತ್ತು. ಕಾರ್ಯಾರಂಭ ಮಾಡಿದಾಗಿನಿಂದ ಗ್ರಾಮ ಪಂಚಾಯತುಗಳು ಮತ್ತು ಪಂಚಾಯತ್ ಸಮಿತಿಗಳು ಒಟ್ಟಾಗಿ 66 ಕೋಟಿ ರೂಗಳ ಹಣ ಮತ್ತು ಧಾನ್ಯ ನಿರ್ವಹಿಸಿದರೆ, ಪಂಚಾಯತು ವ್ಯವಸ್ಥೆಯ ಮೇಲ್ತುದಿಯಲ್ಲಿರುವ ಜಿಲ್ಲಾ ಪರಿಷತ್‌ಗಳು ಇದರ ಜೊತೆ ಇನ್ನೂ 4.5 ಕೋಟಿ ರೂಗಳ ಹಣ ನಿರ್ವಹಿಸಿವೆ.

"ಈ ಪಂಚಾಯತುಗಳ ಕಾರ್ಯದಲ್ಲಿ ನಾವು ಗಮನಾರ್ಹವಾದ ಕೆಲವು ಮುಖ್ಯ ಸಂಗತಿಗಳನ್ನು ಗುರುತಿಸಿದ್ದೇವೆ. ಮೊದಲನೆಯದಾಗಿ, ಚುನಾಯಿತ ಸದಸ್ಯರಿಂದ ಅಪೂರ್ವ ನಾಯಕತ್ವ ಒದಗಿದೆ. ಎರಡನೆಯದಾಗಿ, ಕಾರ್ಯನಿರ್ವಹಣಾ ಶಕ್ತಿಗಳ ಸಂಘಟನೆ ಅದ್ಭುತವಾಗಿ ನಡೆದಿದೆ. ನಾವು, ಸರ್ಕಾರಿ ಅಧಿಕಾರಿಗಳು ಸಮರ್ಥರಾಗಿರುವುದಕ್ಕಿಂತ ಎಷ್ಟೋ ಪರಿಣಾಮಕಾರಿಯಾಗಿ ಇದು ನಡೆದಿದೆ" ಎಂದು ಪಂಚಾಯತ್ ಇಲಾಖೆಯ ಕಾರ್ಯದರ್ಶಿ ಶ್ರೀ ಎಸ್. ಪಿ. ಮಲ್ಲಿಕ್ ಹೇಳುತ್ತಾರೆ.

ಬಿಕ್ಕಟ್ಟಿನ ಸಮಯವನ್ನು ನಿರ್ವಹಿಸುವುದರಲ್ಲಿ ಈ ಪಂಚಾಯತುಗಳಿಗೆ ಇಡೀ ರಾಜ್ಯದಲ್ಲಿ ಸಮನಿಲ್ಲವೆಂದು ಬ್ಲಾಕ್ ಮಟ್ಟದ ಸರ್ಕಾರಿ ಅಧಿಕಾರಿಗಳಿಂದ ರಾಜ್ಯ ಸರ್ಕಾರಕ್ಕೆ ವರದಿಗಳು ಬಂದಿವೆ. "ಯಾವುದನ್ನು ಮುಗಿಸಲು ಸರ್ಕಾರಿ ಏಜೆನ್ಸಿಗಳು ಎರಡು ವರ್ಷ ತೆಗೆದುಕೊಳ್ಳುತ್ತಿದ್ದವೋ ಆ ಕೆಲಸವನ್ನು ಎರಡು ತಿಂಗಳಲ್ಲಿ ಇವು ಮುಗಿಸಿವೆ" ಎಂದು ಒಬ್ಬ ಅಧಿಕಾರಿ ಹೇಳಿದ್ದಾರೆ.

ಬೆಲೆ ನಿಯಂತ್ರಣ:

ಅಲ್ಲದೆ ಅವಶ್ಯ ವಸ್ತುಗಳ ಬೆಲೆಯನ್ನು ನಿಯಂತ್ರಣಕ್ಕೊಳಪಡಿಸಲಾಗಿದೆ. ಅಗತ್ಯವಾದ ಎಚ್ಚರಿಕೆ ಕ್ರಮಗಳನ್ನು ಗ್ರಾಮ ಪಂಚಾಯತುಗಳೇ ಮೂಲನೆಲೆ ಮಟ್ಟದಲ್ಲಿ ಅನುಸರಿಸಿದ್ದರಿಂದ ಪ್ರವಾಹದ ನಂತರ ಕ್ಷಾಮ ತಲೆದೋರಲಿಲ್ಲ.

ಪರಿಹಾರ ಮತ್ತು ಇತರ ಅಭಿವೃದ್ಧಿ ಹಣದ ವಿತರಣೆಯು ಸರಿಯಾಗಿ ನಡೆದಿಲ್ಲವೆಂಬ ಆಪಾದನೆಯನ್ನು ಅನೇಕ ವಿರೋಧ ಪಕ್ಷಗಳು ರಾಜ್ಯಮಟ್ಟದಲ್ಲಿ ಮಾಡುತ್ತಿವೆ. ಆದರೆ ಇದು ಯಾವ ದೊಡ್ಡ ಪ್ರಮಾಣದಲ್ಲೂ ನಡೆದಿಲ್ಲ ಎಂದು ರಾಜ್ಯದ ಅಧಿಕಾರಿಗಳು ಭಾವಿಸುತ್ತಾರೆ. "ಹಾಗಾಗಿದ್ದರೆ ನಾವು ದೂರುಗಳ ಪ್ರವಾಹದಲ್ಲಿ ಮುಳುಗಬೇಕಿತ್ತು" ಎಂದು ಒಬ್ಬ ಅಧಿಕಾರಿ ಹೇಳುತ್ತಾರೆ. "ಅಲ್ಲದೆ ಅಂಥ ಬಿಕ್ಕಟ್ಟಿನ ಸಮಯವನ್ನು ಜನತೆ ಎದುರಿಸುತ್ತಿದ್ದಾಗ, ರಾಜಕೀಯ ಆಧಾರದ ಮೇಲೆ ಯಾವ ಅನ್ಯಾಯ ವಿತರಣೆ ನಡೆಯುವುದಕ್ಕೂ ಅವರು ಬಿಡುತ್ತಿರಲಿಲ್ಲ. ಗ್ರಾಮಗಳಲ್ಲಿ ಅಗಾಧ ಪ್ರತಿಭಟನೆ ನಡೆದಿರುತ್ತಿತ್ತು. ಮತ್ತು ಅದು ಭಾರಿ ಪ್ರಮಾಣದಲ್ಲಿ ನಡೆದಿದ್ದಿದ್ದರೆ ನಮಗೆ ತಿಳಿದಿರುತ್ತಿತ್ತು" ಎಂದು ಅವರು ಹೇಳುತ್ತಾರೆ.

ಹೆಚ್ಚು ಸಮರ್ಥ ಕಾರ್ಯನಿರ್ವಹಣೆ:

ರಾಜ್ಯ ಏಜೆನ್ಸಿಗಳಿಗಿಂತ ಪಂಚಾಯತುಗಳು ಹೇಗೆ ಹೆಚ್ಚು ಸಮರ್ಥವಾಗಿ ಕಾರ್ಯನಿರ್ವಹಿಸುತ್ತವೆಂಬುದನ್ನು ತೋರಿಸಲು ಹಿರಿಯ ಅಧಿಕಾರಿಯೊಬ್ಬರು ಇತ್ತೀಚಿನ ರಸ್ತೆ ವಿಸ್ತಾರ ಕಾರ್ಯವನ್ನು ಉದಾಹರಿಸಿದರು. ಉತ್ತರ ಬಂಗಾಳದ ಒಂದು ಹಳ್ಳಿಯಲ್ಲಿ ರಸ್ತೆಯ ಎರಡೂ ಪಕ್ಕದಲ್ಲಿದ್ದ ಜಾಗವನ್ನು ಕೆಲಸ ನಡೆಸಲು ಪಂಚಾಯತುಗಳಿಗೆ ಉಚಿತವಾಗಿ ಕೊಡಲಾಗಿತ್ತು. ಇದಕ್ಕೆ ಹೆಚ್ಚು ಕಾನೂನು ತಡೆಗಳನ್ನು ತರದೆ, ಹಳ್ಳಿಯ ಹಿತಾಸಕ್ತಿಗೇ ಚರ್ಚೆಯಲ್ಲಿ ಪ್ರಮುಖಸ್ಥಾನ ಕೊಡಲಾಗಿತ್ತು. ಯಾವುದಾದರೂ ಸರ್ಕಾರಿ ಏಜೆನ್ಸಿ ಈ ಕೆಲಸಕ್ಕೆ ಕೈ ಹಾಕಿದ್ದಿದ್ದರೆ, ಭೂಸ್ವಾಧೀನ ಮತ್ತು ಪರಿಹಾರದ ಅನೇಕ ಸಮಸ್ಯೆಗಳು ಎದ್ದಿರುತ್ತಿದ್ದು, ಅದರ ಫಲವಾಗಿ ಕೆಲಸ ತೀರ ವಿಳಂಬವಾಗುತ್ತಿತ್ತು.

ದಕ್ಷಿಣ 24-ಪರಗಣ ಗ್ರಾಮದಲ್ಲಿ ಒಬ್ಬ ಕೈಗಾರಿಕೋದ್ಯಮಿಯ ಕಾರ್ಖಾನೆಯ ಪಕ್ಕದಲ್ಲಿದ್ದ ರಸ್ತೆಯನ್ನು ವಿಸ್ತರಿಸಬೇಕಾಗಿತ್ತು. ಗ್ರಾಮ ಪಂಚಾಯತ್ ಆ ಕೈಗಾರಿಕೋದ್ಯಮಿಯನ್ನು ಕಂಡು, ಸೈಕಲ್ ಮತ್ತು ಸೈಕಲ್ ರಿಕ್ಷಾಗಳ ಚಾಲನೆಗೆ ಅನುಕೂಲವಾಗುವಂತೆ ರಸ್ತೆಯನ್ನು ವಿಸ್ತರಿಸಬೇಕಾಗಿರುವುದರಿಂದ ಸ್ವಲ್ಪ ಜಮೀನನ್ನು ಬಿಟ್ಟುಕೊಡಲು ಕೇಳಿತು. ನೂರಾರು ಗಜಗಳವರೆಗೂ ಎರಡು ಹೆಜ್ಜೆ ಭೂಮಿಯನ್ನು ಅವರು ರಸ್ತೆಗೆ ಬಿಟ್ಟುಕೊಡಬೇಕಾಗಿತ್ತು. ಇದನ್ನು ಅವರು ಸಂತೋಷದಿಂದ ಮಾಡಿ ಹಳ್ಳಿಯವರ ಮೆಚ್ಚುಗೆಗೆ ಪಾತ್ರರಾದರು. ಆದರೆ ಈ ಕೋರಿಕೆ ಸರ್ಕಾರದಿಂದಲೇ ಬಂದಿದ್ದಿದ್ದರೆ, ಅವರೇ ಹೇಳುವಂತೆ, ಬೇರೆ ರೀತಿ ಯೋಚಿಸುತ್ತಿದ್ದರು.

ಇಂಥ ಉದಾಹರಣೆಗಳು ಅಪರೂಪವಲ್ಲ, ಬೇಕಾದಷ್ಟಿವೆ. ಮೂಲನೆಲೆ ಮಟ್ಟದಲ್ಲಿ ಕೋರಿಕೆಗಳು ಎಷ್ಟು ಸಫಲತೆ ಪಡೆಯುತ್ತವೆಂದರೆ, ಅವು ರಾಜ್ಯ ರಾಜಧಾನಿಗಳಿಂದ, ನಿಜವಾಗಿ ಕೆಲಸ ನಡೆಯುವ ಹಳ್ಳಿಗಳಿಗೆ ಅಧಿಕಾರವನ್ನು ವಿಕೇಂದ್ರೀಕರಿಸುವ ಕಾರ್ಯವನ್ನು ಅತ್ಯಂತ ಬಲಗೊಳಿಸುತ್ತವೆ ಎಂದು ಅಧಿಕಾರಿಗಳು ಅಭಿಪ್ರಾಯ ಪಡುತ್ತಾರೆ.

ಕೆಲಸದ ವಿಧಗಳು:

ಪಂಚಾಯತ್‌ಗಳು ಈ ಘಟ್ಟದಲ್ಲಿ ಮುಖ್ಯವಾಗಿ ಕೈಗೊಳ್ಳುವ ಕೆಲಸದ ವಿಧಗಳೆಂದರೆ, ಗ್ರಾಮೀಣ ರಸ್ತೆ ರಚನೆ ಮತ್ತು ವಿಸ್ತರಣೆ, ಕುಡಿಯುವ ನೀರಿನ ಕೊಳವೆ ಬಾವಿಗಳ ರಿಪೇರಿ, ಕೆರೆಗಳ ನಿರ್ಮಾಣ ಮತ್ತು ಧಾನ್ಯ ಸಂಗ್ರಹಣೆ ಕಣಜಗಳ ನಿರ್ಮಾಣ ಮುಂತಾದುವು. ಕೆಲಸವು ಶರವೇಗದಲ್ಲಿ ಸಾಗುತ್ತಿದೆ ಎಂಬುದಕ್ಕೆ ಇನ್ನೊಂದು ಸೂಚನೆಯೆಂದರೆ, ವಿತರಣೆ ಮಾಡಲು ಸರ್ಕಾರವು ಸಾಕಷ್ಟು ಗೋಧಿಯನ್ನು ಕಳುಹಿಸುತ್ತಿಲ್ಲ ಎಂದು ಅನೇಕ ಪಂಚಾಯತ್‌ಗಳಿಂದ ದೂರುಗಳು ಬಂದಿವೆ.

ಕೆಲವು ದಿವಸಗಳಿಂದ ಸಾರಿಗೆ ತೊಂದರೆಗಳಿಂದಾಗಿ ಗೋಧಿ ವಿತರಣೆ ಅವ್ಯವಸ್ಥಿತವಾಗಿದೆಯೆಂದು ಒಬ್ಬ ಅಧಿಕಾರಿ ಒಪ್ಪಿಕೊಂಡರು. ಇದರ ಫಲವಾಗಿ ಅನೇಕ ಗ್ರಾಮ ಪಂಚಾಯತಿಗಳು ಕೂಲಿಗೆ ಹಣವನ್ನೇ ಕೊಟ್ಟರೂ, ಹಣದ ಬದಲಾಗಿ ಗೋಧಿಗೆ "ಚೀಟಿ"ಯನ್ನೇ ಕೊಡುವಂತೆ ಒತ್ತಾಯವನ್ನೆದುರಿಸುತ್ತಿವೆ. ಇದು ಸಮಸ್ಯೆಗಳನ್ನು ತಂದರೂ ಕೆಲಸ ನಿಲ್ಲಿಸುವಷ್ಟು ತೀವ್ರರೂಪದ್ದಲ್ಲ.

100 ಕ್ಯೂಬಿಕ್ ಅಡಿಗಳಷ್ಟು ಭೂಮಿಯನ್ನು ಕೆರೆಗಾಗಿ ಅಗೆದರೆ ಒಬ್ಬ ಕೂಲಿಕಾರನಿಗೆ ಎರಡು ರೂಪಾಯಿ ಮತ್ತು ಮೂರು ಕಿಲೋ ಗೋಧಿ ಸಿಗುತ್ತದೆ. ಗ್ರಾಮದ ಹಿತಾಸಕ್ತಿಯನ್ನೇ ಮನಸ್ಸಿನಲ್ಲಿಟ್ಟುಕೊಂಡು, ಅನೇಕ ಪ್ರದೇಶಗಳಲ್ಲಿ ಅದೇ ವೇತನಕ್ಕೆ 125 ಕ್ಯೂಬಿಕ್ ಅಡಿಗಳನ್ನು ಅಗೆಯಲೂ ಜನ ಸಿದ್ಧರಿದ್ದಾರೆ. ಆದ್ದರಿಂದ ಈ ತಾತ್ಕಾಲಿಕ ಗೋಧಿ ಅಭಾವವು ಅವರ ಮನೋಭಾವವನ್ನು ಬದಲಾಯಿಸುವುದಿಲ್ಲ ಎಂದು ಅಧಿಕಾರಿಗಳು ಭಾವಿಸುತ್ತಾರೆ.

ನಗರಗಳಿಗೆ ವಲಸೆ ಬರುವುದನ್ನು ತಡೆದಿರುವುದಷ್ಟೇ ಅಲ್ಲ, ಶಮ

[6ನೇ ಪುಟ ನೋಡಿ]

"ಸರ್ಕಾರಿ ಏಜೆನ್ಸಿಗಳು ಯಾವ ಕೆಲಸವನ್ನು ಮುಗಿಸಲು ಎರಡು ವರ್ಷಗಳನ್ನು ತೆಗೆದುಕೊಳ್ಳುತ್ತಿದ್ದವೋ ಆ ಕೆಲಸವನ್ನು ಇವು ಎರಡು ತಿಂಗಳಲ್ಲಿ ಮುಗಿಸಿವೆ" ಎಂದು ಪ. ಬಂಗಾಳದ ಪಂಚಾಯತುಗಳ ಬಗ್ಗೆ ಒಬ್ಬ ಅಧಿಕಾರಿಯು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಪಂಚಾಯತುಗಳ ಬಗ್ಗೆ ಗೌತಮ್ ಅಧಿಕಾರಿಯವರು ಹಿಂದೂ ಪತ್ರಿಕೆಯಲ್ಲಿ ಬರೆದ ಲೇಖನ ಇದು.

ತ್ರಿಪುರಾದ ವಾಮರಂಗ ಸರ್ಕಾರವನ್ನು ಪದಚ್ಯುತಿಗೊಳಿಸಲು ಭೀಕರ ತಂತ್ರ

ತ್ರಿಪುರಾದ ವಾಮರಂಗ ಸರ್ಕಾರದ ಪ್ರಗತಿಶೀಲ ಕ್ರಮಗಳು ವಿರೋಧಪಕ್ಷಗಳಿಗಿರುವ ಅಲ್ಪಸ್ವಲ್ಪ ಜನತೆಯ ತಳಹದಿಯನ್ನು ತೆಳ್ಳಗೆ ಮಾಡುತ್ತಿರುವಂತೆಯೇ, ರಾಜ್ಯವು ಪ್ರತಿಗಾಮಿಗಳು ಮತ್ತು ಸ್ವಪ್ರತಿಷ್ಠೆಯಿಂದ ಅಂಧವಾಗಿರುವ ಸಂಘಟನೆಗಳು ನಡೆಸುತ್ತಿರುವ ಭೀಕರ ಚಟುವಟಿಕೆಗಳ ಬೆಂಕಿಯ ಮಡಿಲಾಗಿದೆ. "ಅಮರ ಬಂಗಾಲೀ" ಎಂಬ ರಾಜಕೀಯ ಸಂಸ್ಥೆಯ ಮೂಲಕ ಆನಂದ ಮಾರ್ಗಿಗಳು ಮತ್ತು ಚರ್ಚು ಮತ್ತು ಮಿಷನರಿಗಳಿಂದ ಸಹಾಯ, ಬೆಂಬಲ ಪಡೆದಿರುವ ತ್ರಿಪುರಾ ಉಪಜಾತಿ ಯುವಸಮಿತಿ ಎರಡೂ ಈ ಹೇಯ ಕೃತ್ಯಗಳಲ್ಲಿ ಮುಂದಾಗಿವೆ.

ಆಂತರಿಕ ಪ್ರತಿಗಾಮಿಗಳು ಅವರನ್ನು ಮೇಲೆತ್ತುತ್ತಿದ್ದಾರೆ. ಪ್ರತಿಗಾಮಿ ಅಂತರರಾಷ್ಟ್ರೀಯ ಏಜೆನ್ಸಿಗಳು ಅವರಿಗೆ ಎಲ್ಲ ತರದ ಸಹಾಯ ನೀಡುತ್ತಿದ್ದಾರೆ. ಉನ್ನತ ವರ್ತಕರು, ಭೂಮಾಲೀಕರು, ಜೋತೆದಾರರು, ವಿವಿಧ ವಿರೋಧ ಪಕ್ಷಗಳಲ್ಲಿರುವ ಅವರ ವಿಧೇಯ ಪ್ರತಿನಿಧಿಗಳು, ವಿಚಾರಣಾ ಸಮಿತಿಗಳು ಹೆಸರಿಸಿರುವ ಆಡಳಿತ ಮತ್ತು ಪೋಲೀಸ್ ಪಡೆಯಲ್ಲಿರುವ ಭ್ರಷ್ಟ ಅಧಿಕಾರಿಗಳು ಮತ್ತು ಇತ್ತೀಚೆಗೆ ಆಕಾಶವಾಣಿಯ ತ್ರಿಪುರಾ ಸ್ಟೇಷನ್ ಇವೆಲ್ಲವೂ ವಾಮರಂಗ ಸರ್ಕಾರವನ್ನು ಪದಚ್ಯುತಿಗೊಳಿಸುವ ಈ ಕೆಟ್ಟ ಸನ್ನಾಹದಲ್ಲಿ ಸೇರಿದ್ದಾರೆ.

ಈ ತಿಂಗಳ ಅವಧಿಯಲ್ಲೇ ತಾವು ಆಡಳಿತವನ್ನು ಸ್ಥಗಿತಗೊಳಿಸುವುದಾಗಿ ಅವರಲ್ಲಿ ಅನೇಕರು ಎತ್ತರದನಿಯಲ್ಲಿ ಅರಚುತ್ತಿದ್ದಾರೆ. "ಅಮರಬಂಗಾಲೀ"ಯ ಕಾರ್ಯದರ್ಶಿಯು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ಗೆ ಪತ್ರಬರೆದು ತಾವೇ ಕಾನೂನನ್ನು ಕೈಗೆ ತೆಗೆದುಕೊಳ್ಳುವುದಾಗಿಯೂ, ಸದ್ಯದ ಸರ್ಕಾರವನ್ನು ಪದಚ್ಯುತಿಗೊಳಿಸುವುದಾಗಿಯೂ ತಿಳಿಸಿದ್ದಾನೆ.

ಕೋಮುಕಲಹಗಳನ್ನು ಹೊತ್ತಿಸಲು ಅವರು ನಡೆಸಿದ ಪ್ರಯತ್ನಗಳೆಲ್ಲವೂ ನಿಷ್ಫಲವಾದದ್ದರಿಂದ, ನಿರಾಶರಾಗಿ ಅವರು ಈ ಭೀಕರ ತಂತ್ರಗಳ ಮೊರೆಹೊಕ್ಕಿದ್ದಾರೆ.

ರಾಜಕೀಯ ಪಕ್ಷಗಳ ಬೆಂಬಲ :

ಚುನಾವಣಾ ಕಣಗಳಲ್ಲಿ ಅನುಭವಿಸಿರುವ ಪದೇ ಪದೇ ಪತನಗಳು, ರಾಜಕೀಯ ರಂಗದಲ್ಲಿ ಮೂಲೆಗುಂಪಾದದ್ದು ಮತ್ತು ದಿನೇದಿನೇ ಹೆಚ್ಚುತ್ತಿರುವ ಕ್ಷೋಭೆ ಇವುಗಳಿಂದ ನಿರಾಶರಾದ ವಿರೋಧ ಪಕ್ಷಗಳು ಈ ಜನರ ಆಶ್ರಯ ಪಡೆದು, ಭೀಕರ ತಂತ್ರಗಳನ್ನು ಅವಲಂಬಿಸಿ ರಾಜ್ಯದಲ್ಲಿ ಕಾನೂನು ರಾಹಿತ್ಯವನ್ನು ಉಂಟುಮಾಡಲು ಪ್ರಯತ್ನಿಸುತ್ತಿದ್ದಾರೆ. ರಾಜಕೀಯ ಅಧಿಕಾರವನ್ನು ಕಳೆದುಕೊಂಡ ಪ್ರತಿಗಾಮಿಗಳು ಯಾವಾಗಲೂ ಅನುಸರಿಸುವ ತಂತ್ರ ಇದೇ ಆಗಿದೆ. ತಾವೇ ರೂಪಿಸಿದ ಎಲ್ಲ ಪ್ರಜಾಪ್ರಭುತ್ವವಾದಿ ನಿಯಮಗಳನ್ನು ಮತ್ತು ನೈತಿಕ ರೂಢಿಗಳನ್ನು ಅವರು ಅಧಿಕಾರ ಪಡೆಯುವುದಕ್ಕೋಸ್ಕರ ತಲೆಕೆಳಗು ಮಾಡುತ್ತಾರೆ.

ಈ ಪ್ರತಿಗಾಮಿ ಅಂಶಗಳು, ವಿಕೃತಗೊಳಿಸಿದ ಮತ್ತು ತಿದ್ದಿದ ಕಥೆಗಳನ್ನು ತ್ರಿಪುರಾದ ಆಕಾಶವಾಣಿಯಲ್ಲೂ ತುಂಬುತ್ತಿದ್ದಾರೆ. ಆಕಾಶವಾಣಿಯ ಅಧಿಕಾರಿಗಳು ಅವುಗಳ ಸರಿತಪ್ಪನ್ನು ಶೋಧಿಸದೆಯೇ ಅವನ್ನು ಬಿತ್ತರಿಸುತ್ತಿದ್ದಾರೆ. ವಾಮರಂಗ ಸರ್ಕಾರದ ಮೇಲೆ ಆರೋಪಗಳನ್ನು ಮಾಡಲು ಆಕಾಶವಾಣಿಯನ್ನು ಬಳಸಿಕೊಳ್ಳಲೂ ಇತ್ತೀಚೆಗೆ ಶಿಕ್ಷಣದ ಉಪನಿರ್ದೇಶಕರಿಗೆ ಅವಕಾಶವೀಯಲಾಯಿತು.

ತ್ರಿಪುರಾದ ಹೋರಾಟದ ಜನತೆಯೊಂದಿಗೆ ಸಂಪೂರ್ಣವಾಗಿ ದೂರವಾಗಿರುವ ಈ "ವಿಮೋಚನಾ ಚಳುವಳಿಯ" ವೀರರು, ಬುಡಕಟ್ಟು ಪ್ರದೇಶಗಳ ಒಳಗಿನ ಕೆಲವು ಬಂಗಾಲಿ ಪ್ರದೇಶಗಳಲ್ಲಿ ತಮ್ಮ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಅಂಥ ಭಾವನೆಗಳನ್ನು ಪ್ರಚೋದಿಸುವ ಊಹಾಪುದ್ದಿಗಳನ್ನು ಅವರು ಹರಡುತ್ತಿದ್ದಾರೆ. ನಂತರ ಅವರ ಸಶಸ್ತ್ರ ಬಂಡುಕೋರರು ಮುಂದಕ್ಕೆ ಕಾಣಿಸಿಕೊಳ್ಳುತ್ತಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಸಿ. ಐ. ಟಿ. ಯು ಕಿಸಾನ್‌ಸಭೆ, ಎಸ್. ಎಫ್. ಐ. ಪ್ರಜಾಪ್ರಭುತ್ವವಾದಿ ಯುವ ಸಮ್ಮೇಳನ, ಗಣತಾಂತ್ರಿಕ ಮಹಿಳಾಸಮಿತಿ ಮತ್ತು ಕೆಲಸಗಾರರ ಸಂಘಗಳ ಕಾರ್ಯಕರ್ತರು ಅವರ ಆಕ್ರಮಣಗಳ ಮುಖ್ಯ ಗುರಿಯಾಗಿದ್ದಾರೆ.

ತ್ರಿಪುರಾದ ವಿಧಾನಸಭೆಯಲ್ಲಿ ತ್ರಿಪುರಾ ಬುಡಕಟ್ಟು ಪ್ರದೇಶಗಳ ಸ್ವಾಯತ್ತ ಜಿಲ್ಲಾಸಮಿತಿ ನಿಯಮ (1979)ವನ್ನು ಜಾರಿಗೊಳಿಸುವುದಕ್ಕೆ ಸ್ವಲ್ಪ ಮುಂಚೆ ಈ ಹೋರಾಟಗಳ ಮೊದಲ ಘಟ್ಟ ಆರಂಭವಾಯಿತು. "ಅಮರಬಂಗಾಲೀ" ಸಂಸ್ಥೆಯು ಜನವರಿ 17 ರಂದು ತ್ರಿಪುರಾ ಬಂದ್‌ಗೆ ಕರೆಕೊಟ್ಟಿತ್ತು.

ಮಾರ್ಕ್ಸ್‌ವಾದಿ ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ :

ಆ ದಿನ ಅವರು ಪ್ರಚಾರ್ ಕಲ ಮಾರುಕಟ್ಟೆಗೆ ಬೆಂಕಿ ಹಚ್ಚಿ, ಬಿಸ್ರಾಮ್‌ಗಂಜ್‌ನಲ್ಲಿ ತ್ರಿಪುರಾ ರಾಜ್ಯ ಸಾರಿಗೆ ಸಂಸ್ಥೆಗೆ ಸೇರಿದ ಆರು ಬಸ್ಸುಗಳನ್ನು ನಾಶಮಾಡಿದರು. ಟಿಹಿಯಾಮುರೋ ಹದಲ್ಲಿ ಅವರು, ಬುಡಕಟ್ಟು ಜನರು ಇಪ್ಪತ್ತೈದು ಬಂಗಾಲಿಗಳ ಕೊಲೆಮಾಡಿದ್ದಾರೆ ಎಂಬ ಸುಳ್ಳುಸುದ್ದಿ ಹರಡಿ, ಅದರ ಆಧಾರದ ಮೇಲೆ ಸುತ್ತಮುತ್ತ ಹಳ್ಳಿಗಳ ನೂರಾರು ಜನರನ್ನು ಸಂಘಟಿಸಿದರು. ನಂತರ ಅವರು ಪೋಲೀಸರ ಎದುರಿನಲ್ಲೇ ವಾಮರಂಗ ಸ್ವಯಂಸೇವಕರಿಗೆ ಅಮಾನುಷವಾಗಿ ಹೊಡೆದು, ಡಾಕ್ ಬಂಗಲೆಯ ಆಸ್ತಿಪಾಸ್ತಿಗಳನ್ನು ನಾಶಮಾಡಿ, ಪೋಲೀಸ್ ಠಾಣೆಗೆ ಘೇರಾವೊ ಮಾಡಿದರು. ಕಾಂ. ರವೀಂದ್ರ ದೇವ್‌ವರ್ಮ ಅವರು ಇವರ ಕೈಗೆ ಬಲಿಯಾದರು. ಹೃದಯದೇವ್ ವರ್ಮ ಅವರಿಗೆ ತೀವ್ರ ಗಾಯಗಳಾದವು.

ವಿಧಾನಸಭೆಯ ಮಾರ್ಚ್ ಅಧಿವೇಶನದಲ್ಲಿ ಜಿಲ್ಲಾಸಮಿತಿ ನಿಯಮವನ್ನು ಕೊನೆಯದಾಗಿ ಅಂಗೀಕರಿಸಿದಾಗ, "ಅಮರಬಂಗಾಲೀ" ಸಂಸ್ಥೆಯು ಅಗರ್ತಲಾದಲ್ಲಿ ಒಂದು ಕೇಂದ್ರ ರ‍್ಯಾಲಿಯನ್ನು ಏರ್ಪಡಿಸಿತು.

ಈ ರ‍್ಯಾಲಿಯನ್ನು ಸಫಲಗೊಳಿಸುವುದಕ್ಕಾಗಿ ಎರಡು ಸಭೆಗಳನ್ನು ನಡೆಸಲಾಯಿತು. ಒಂದು, ಮಾರ್ಚ್ 18ರಂದು ಕಾಂಗ್ರೆಸ್ಸಿನ ಹಳೆಯ ಮಂತ್ರಿಮಂಡಲದಲ್ಲಿ ವಿದ್ಯಾಮಂತ್ರಿಯಾಗಿದ್ದ ಕೃಷ್ಣದಾಸ್ ಭಟ್ಟಾಚಾರ್ಯ ಅವರ ಮನೆಯಲ್ಲಿ ನಡೆಯಿತು. ಇನ್ನೊಂದು, ಮಾರ್ಚ್ 23 ರಂದು ಹಿಂದಿನ ಸಿ. ಎಫ್. ಡಿ. ಮುಖ್ಯಮಂತ್ರಿಯಾಗಿದ್ದ ಪ್ರಫುಲ್ಲ ಕುಮಾರ್‌ದಾಸ್ ಅವರ ಮನೆಯಲ್ಲಿ ನಡೆಯಿತು. ಈ ಆತಿಥೇಯರಲ್ಲದೆ, ಹಿಂದಿನ ಜನತಾ ಮುಖ್ಯ ಮಂತ್ರಿಯಾಗಿದ್ದ ರಾಧಿಕಾರಂಜನ್‌ಗುಪ್ತ, ಹಿಂದಿನ ಜನತಾಮಂತ್ರಿ ಸಮೀರ್ ಬರ್ಮನ್, ಕಾಂಗ್ರೆಸ್ (ಐ) ನಾಯಕ ಮನ್ಸೂರ್ ಆಲಿ ಇವರೆಲ್ಲ ಸಭೆಯಲ್ಲಿ ಭಾಗವಹಿಸಿದ್ದರು. ಬಾಡಿಗೆಯ ಸ್ವಯಂಸೇವಕರನ್ನು ಸಾಗಿಸಲು 132 ಟ್ರಕ್ಕುಗಳನ್ನು ನೇಮಿಸಬೇಕೆಂದು ಅವರು ತೀರ್ಮಾನಿಸಿದರು. ಖರ್ಚನ್ನು ತೂಗಿಸಲು ಬಟ್‌ತಾಲದ ಅಂಗಡಿಯ ಮಾಲೀಕರು 15,000 ರೂಗಳನ್ನು ಠೇವಣಿ ಇಡಬೇಕೆಂದು ಕೇಳಿಕೊಳ್ಳಲಾಯಿತು.

ರಾಜ್ಯದ "ಅಮರಬಂಗಾಲೀ" ಮತ್ತು ವಿರೋಧ ಪಕ್ಷಗಳ ನಡುವೆ ಇರುವ ಹತ್ತಿರದ ಸಂಬಂಧವನ್ನು ಈ ಸಭೆಗಳು ಮತ್ತು ಅವರ ತೀರ್ಮಾನಗಳು ತಿಳಿಸಿದವು.

ಅಗರ್ತಲಾದಲ್ಲಿ ನಡೆದ ಸಭೆಗೆ 5000 ಜನ ಬಂದಿದ್ದರು. ಅವರಲ್ಲಿ 1500 ಜನ ಲಾಠಿಗಳು ಅಥವಾ ಕೋಲುಗಳನ್ನು ಹಿಡಿದಿದ್ದರು.

ಮಾರ್ಚ್ 23ರಂದು, ಬುಡಕಟ್ಟುಗಳ ನಡುವಿನ "ಅಮರಬಂಗಾಲೀ"ಯ ಸೋದರ ಸಂಸ್ಥೆಯಾದ ತ್ರಿಪುರಾ ಉಪಜಾತಿ ಯುವ ಸಮಿತಿಯು ಇನ್ನೊಂದು ಕೇಂದ್ರ ರ‍್ಯಾಲಿಯನ್ನು ಏರ್ಪಡಿಸಿತ್ತು. ಇದರಲ್ಲಿ ಸಮವಸ್ತ್ರ ಧರಿಸಿದ ಅವರ ನೂರಾರು ತ್ರಿಪುರಿ ಪಡೆಗಳು ಭಾಗವಹಿಸಿದ್ದವು.

ಎರಡು ರ‍್ಯಾಲಿಗಳಲ್ಲಿ ಭಾಷಣಮಾಡಿದವರು ಮಾರ್ಕ್ಸ್‌ವಾದಿ ಪಕ್ಷವನ್ನೇ ತಮ್ಮ ಆಕ್ರಮಣಕ್ಕೆ ಗುರಿಯಾಗಿಟ್ಟುಕೊಂಡರು.

"ಅಮರಬಂಗಾಲೀ"ಯ ಕೇಂದ್ರ ರ‍್ಯಾಲಿಯಾದ ನಂತರ ಅಗರ್ತಲಾದಲ್ಲಿ ಒಂದು ಗೋಪ್ಯ ಸಭೆ ನಡೆಸಲಾಯಿತು. ಅದರಲ್ಲಿ ವಾಮರಂಗ ಸರ್ಕಾರವನ್ನು ಉರುಳಿಸುವ ಯತ್ನದಲ್ಲಿ ಯಾವ ತಂತ್ರವನ್ನೂ ಕಡೆಗಣಿಸಬಾರದೆಂಬ ತೀರ್ಮಾನ ಕೈಗೊಳ್ಳಲಾಯಿತು.

ಹೆಚ್ಚು ಹೆಚ್ಚು ಹಲ್ಲೆಗಳು :

* ಈ ನಿರ್ಧಾರದ ನಂತರ, ನೂತನ್ ಬಜಾರಿನಲ್ಲಿ "ಅಮರ ಬಂಗಾಲೀ"ಯ ಅಂಶಗಳು ಅನೇಕ ದಿನಗಳವರೆಗೆ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ರೈತರ ಮೇಲೆ ನಿರಂತರ ಹಲ್ಲೆ ನಡೆಸಿದರು.

* ಉಪವಿಭಾಗ ಪಟ್ಟಣವಾದ ಕೋವೈನಲ್ಲಿ ಅವರು ಪ್ರದರ್ಶನ ನಡೆಸುವ ಹೆಸರಿನಲ್ಲಿ ಜನತೆಯನ್ನು ಒಟ್ಟುಗೂಡಿಸಿ, ಮಾರ್ಕ್ಸ್‌ವಾದಿ ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿ, ಅನೇಕ ಪಂಚಾಯತ್ ಸದಸ್ಯರು, ವಿದ್ಯಾರ್ಥಿಗಳು ಮತ್ತು ಯುವಜನರ ಮೇಲೆ ಆಕ್ರಮಣ ನಡೆಸಿ ಗಾಯಗೊಳಿಸಿದರು. ಇದು ಸಾಲದೆಂಬಂತೆ ಅವರು ಆಸ್ಪತ್ರೆ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸಿದಾಗ ವೈದ್ಯರು, ನರ್ಸುಗಳು ಮತ್ತು ಹಾಸಿಗೆಯ ಮೇಲೆ ಮಲಗಿದ್ದ ರೋಗಿಗಳೂ ಗಾಯಗೊಂಡರು. ಈ ಹಲ್ಲೆಗಳಲ್ಲಿ ಕಾಂಗ್ರೆಸ್ಸಿನ ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್‌ನವರೂ ಭಾಗವಹಿಸಿದ್ದರು.

* ಜುಲೈಬಾರಿಯಲ್ಲಿ ಅವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಚೇರಿಯ ಮೇಲೆ ದಾಳಿ ನಡೆಸಿದರು. ಖೋಯಾಪುರ್‌ನಲ್ಲಿ ಅವರು ವಿದ್ಯಾರ್ಥಿಗಳು ಮತ್ತು ಪಕ್ಷದ ಯುವ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದರು.

* ಅಮರ್‌ಪುರ್‌ನಲ್ಲಿ ಏಪ್ರಿಲ್ 28, 29ರಂದು, ತ್ರಿಪುರಾ ಬೆಸ್ತರ ಸಂಘದ ವಾರ್ಷಿಕ ಅಧಿವೇಶನಕ್ಕೆ ಸೇರಿದ ಪ್ರತಿನಿಧಿಗಳ ಮೇಲೆ ಕೈಮಾಡಿದರು. ರಾಜ್ಯದ ಕಾರ್ಮಿಕ ಮಂತ್ರಿ ಮತ್ತು ಸಿ.ಐ.ಟಿ.ಯು.ನ ಅಧ್ಯಕ್ಷರಾದ ಕಾಂ. ಬಿರೇನ್ ದತ್ತರು ಭಾಗವಹಿಸಿದ್ದ ಅಧಿವೇಶನದ ಬಹಿರಂಗಸಭೆಯಲ್ಲೂ ಅವರು ದಾಳಿ ನಡೆಸಿದರು. ಶಾಲೆ, ಡಾಕ್ ಬಂಗಲೆ, ಪೋಲೀಸ್‌ಠಾಣೆ ಇವೆಲ್ಲವೂ ಅವರ ಆಕ್ರಮಣಕ್ಕೆ ಗುರಿಯಾದವು.

ಈ ದಾಳಿಗಳನ್ನು ನಿಲ್ಲಿಸಲು ಪೋಲೀಸರು ಗೋಲಿಬಾರ್ ಮಾಡಬೇಕಾಯಿತು. ಆ ವೇಳೆಗೆ ಅನೇಕ ಪೋಲೀಸರು, ಒಬ್ಬ ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರ್ ಮತ್ತು ಒಬ್ಬ ಡಿ ಎಸ್ ಪಿ ಗಾಯಗೊಂಡಿದ್ದರು. ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಇನ್ನೂ ಆಸ್ಪತ್ರೆಯಲ್ಲಿದ್ದಾರೆ.

* ಒಬ್ಬ ಪಾಲಿಟೆಕ್ನಿಕ್ ವಿದ್ಯಾರ್ಥಿಯ ಕೊಲೆಯ ಹೆಸರಿನಲ್ಲಿ, ಗೂಂಡಾಗಳು ಅರಣ್ಯ ಮಂತ್ರಿಯನ್ನು ಹೊಡೆಯಲು ಮೇ ಆರರಂದು ಪ್ರಯತ್ನಿಸಿದರು.

(ಪಿ.ಟಿ.ಐ. ನ ಮೇ 11ರ ಇತ್ತೀಚಿನ ವರದಿಯಂತೆ, ನಿರ್ಬಂಧ ಆಜ್ಞೆಯನ್ನು ಅತಿಕ್ರಮಿಸಿದ ಆಪಾದನೆಯ ಮೇಲೆ ಬಂಧಿತರಾಗಿದ್ದ ತಮ್ಮ ನಾಲ್ವರು ಸದಸ್ಯರನ್ನು ಬಿಡುಗಡೆ ಮಾಡುವಂತೆ ತೆಲ್ಲಮುರಾ ಪಟ್ಟಣದ ಪೋಲೀಸ್ ಠಾಣೆಗೆ "ಅಮರ ಬಂಗಾಲೀ" ಸದಸ್ಯರು ಕಲ್ಲುತೂರಿದರು. ಈ ಆಕ್ರಮಣದಲ್ಲಿ ಮಾರ್ಕ್ಸ್‌ವಾದಿ ಪಕ್ಷದ ಎಂ.ಎಲ್.ಎ. ಜಿತೇನ್ ಸರ್ಕಾರ್ ಮತ್ತು ಇಬ್ಬರು ಪೋಲೀಸ್ ಅಧಿಕಾರಿಗಳಿಗೆ ತೀವ್ರ ಗಾಯಗಳಾದವು.)

ಉಪಜಾತಿ ಸಮಿತಿಯ ಆಟ :

ಆನಂದಮಾರ್ಗಿಗಳ ನೇತೃತ್ವದ ಮತ್ತು ನಿರಾಶೆಗೊಂಡ ರಾಜಕಾರಣಿಗಳ ಸಹಾಯ ಪಡೆದಿರುವ "ಅಮರ ಬಂಗಾಲೀ"ಗಳ ತಂತ್ರ ಈ ಅನಿಷ್ಟ ಆಟವನ್ನು ಆಡುವುದಾದರೆ, ಅವರ ಸಹವರ್ತಿಗಳಾದ ತ್ರಿಪುರಾ ಬುಡಕಟ್ಟು ಉಪಜಾತಿ ಸಮಿತಿಯ ತಂತ್ರವೂ ಇದಕ್ಕಿಂತ ಭಿನ್ನವಾಗೇನೂ ಇಲ್ಲ.

ಕಾಂಗ್ರೆಸ್ ಆಳಿಕೆಯಲ್ಲಿ ಅವರು, ತಮ್ಮ ಬೇಡಿಕೆಗಳ ಈಡೇರಿಕೆಯ ಹೆಸರಿನಲ್ಲಿ ಕಾಂಗ್ರೆಸ್ ಮುಖ್ಯಮಂತ್ರಿಗಳ ಹಿಂಬಾಲಕರಾಗಿದ್ದರು. ಬುಡಕಟ್ಟು ಜನತೆಯ ಬೇಡಿಕೆಗಳ ಹೋರಾಟದಲ್ಲಿ ತಮ್ಮ ಜೀವವನ್ನೇ ತೆತ್ತ ಕಾಮ್ರೇಡುಗಳಾದ ಮೋಹಿನಿ ತ್ರಿಪುರ ಮತ್ತು ಧನಂಜಯ್ ತ್ರಿಪುರ ಅವರ ಬಗ್ಗೆ ಒಂದೇ ಒಂದು ಸಹಾನುಭೂತಿಯ ಮಾತನ್ನೂ ಅವರು ಆಡಿರಲಿಲ್ಲ. ಸೇನ್ ಗುಪ್ತ ಮಂತ್ರಿಮಂಡಲವು ಬುಡಕಟ್ಟು ಮೀಸಲಾತಿಯನ್ನು ತೆಗೆದುಹಾಕಿದಾಗ, 1969ರ ವರೆಗೂ ಬುಡಕಟ್ಟು ಜಮೀನನ್ನು ಬುಡಕಟ್ಟಿಗೆ ಸೇರದವರಿಗೆ ಅನ್ಯಾಯವಾಗಿ ವರ್ಗಾವಣೆ ಮಾಡಿದಾಗ ಅವರು ಪ್ರತಿಭಟನೆ ಸೂಚಿಸಲಿಲ್ಲ.

ಆದರೆ ವಾಮರಂಗ ಸರ್ಕಾರವು ಆಡಳಿತ ವಹಿಸಿಕೊಂಡ ತಕ್ಷಣ, ತಮ್ಮ ಬೇಡಿಕೆಗಳು ಈಡೇರದಿದ್ದರೆ ತಾವೇ ಪರ್ಯಾಯವಾದ ಆಡಳಿತವೊಂದನ್ನು ನಡೆಸುವುದಾಗಿ ಉಪಜಾತಿ ಸಮಿತಿ ಬೆದರಿಕೆ ಹಾಕಿದೆ. ಚರ್ಚು ಅವರಿಗೆ ಎಲ್ಲ ತರದ ಬೆಂಬಲ ಕೊಟ್ಟಿದೆ.

ಸದ್ಯದಲ್ಲಿ, ಬುಡಕಟ್ಟು ಜನರ ಬೇಡಿಕೆಗಳೆಲ್ಲವನ್ನೂ ವಾಮರಂಗ ಸರ್ಕಾರ ಈಡೇರಿಸಿದ ಮೇಲೂ, ಯಾವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅವರ ಬೇಡಿಕೆಗಳನ್ನು ಈಡೇರಿಸಿತೋ ಆ ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಯುತ್ತಿದೆ. ಉಪಜಾತಿ ಸಮಿತಿಗೆ ಸೇರುವಂತೆ ಮತ್ತು ಧನಸಹಾಯ ಕೊಡುವಂತೆ ಬಡ ಬುಡಕಟ್ಟು ಜನರನ್ನು ಪೀಡಿಸಲಾಗುತ್ತಿದೆ.

[6ನೇ ಪುಟ ನೋಡಿ]

ಮೂಲನೆಲೆಗಳಲ್ಲಿ ಹೊಸ ನಾಯಕತ್ವ

[4ನೇ ಪುಟದಿಂದ]

ವ್ಯಾಪಾರ ಮುಳುಗುತ್ತಿದೆ ಎಂದು ಅನೇಕ ಸಾಂಪ್ರದಾಯಿಕ ಲೇವಾದೇವಿಗಾರರು ದೂರುತ್ತಿದ್ದಾರೆ. ಮುಂದಿನ ಕೆಲವು ವರ್ಷಗಳಲ್ಲಿ ಪಂಚಾಯತಿಗಳಿಗೆ ಒದಗುವ ಹಣ ಮತ್ತು ಗೋಧಿ ಸರಬರಾಜಿನ ಮೇಲೆ ಅನೇಕ ವಿಚಾರಗಳು ನಿಂತಿವೆ. ಒಂದೇ ಒಂದು ವರ್ಷದ ಅವ್ಯವಸ್ಥಿತ ಸರಬರಾಜು ಮತ್ತು ವಿತರಣೆಗಳು ಇದುವರೆಗೆ ಹಲವು ತಿಂಗಳುಗಳಲ್ಲಿ ಪಂಚಾಯತಿಗಳು ಸ್ಥಾಪಿಸಿಕೊಂಡಿರುವ ಪ್ರತಿಷ್ಠೆಯನ್ನು ಹಾಳುಗೆಡವಬಹುದು. ಆದ್ದರಿಂದ ಗೋಧಿ ಸರಬರಾಜಿನ ಬಗ್ಗೆ ಬಂದಿರುವ ದೂರುಗಳನ್ನು ಸರ್ಕಾರ ಹಗುರವಾಗಿ ತೆಗೆದುಕೊಳ್ಳದಿರುವುದು ಮುಖ್ಯವಾಗಿದೆ.

ಬ್ಯಾಂಕುಗಳಿಂದ ಸಾಲ :

ಕೇಂದ್ರ ಸರ್ಕಾರದಿಂದ ನಿರೂಪಿತವಾದ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಅನ್ವಯ, ಸಾಲಗಳ ವಿತರಣೆಯ ಬಗ್ಗೆ ರಾಷ್ಟ್ರೀಕೃತ ಬ್ಯಾಂಕುಗಳೊಂದಿಗೆ ರಾಜ್ಯ ಸರ್ಕಾರವು ಒಂದು ಒಪ್ಪಂದವನ್ನು ಮಾಡಿಕೊಂಡಿದೆ. ಪಶ್ಚಿಮ ಬಂಗಾಳದಲ್ಲಿ ಈ ಯೋಜನೆಯನ್ನು ಜಾರಿಗೊಳಿಸುವುದನ್ನೂ ಪಂಚಾಯತಿಗಳಿಗೆ ಒಪ್ಪಿಸಲಾಗುತ್ತದೆ.

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಪ್ರಕಾರ, ಮೊದಲಿಗೆ ಬ್ಯಾಂಕುಗಳಿಂದ ನೇರವಾಗಿ ಸಾಲಪಡೆದವರಿಗೆ ಸಬ್ಸಿಡಿ ಹಣವನ್ನು ನೀಡಲು ರಾಜ್ಯ ಸರ್ಕಾರವು ಇರುವ 169 ಪಂಚಾಯತಿಗಳಿಗೂ ತಲಾ ಐದುಲಕ್ಷ ರೂ ನೀಡುತ್ತದೆ. ಈ ಸರ್ಕಾರಿ ಸಬ್ಸಿಡಿಯು ಸುಮಾರಾದ ಮತ್ತು ಭೂಹೀನ ರೈತರಿಗೆ ಶೇ. 33.3ರಷ್ಟು ಸಣ್ಣ ರೈತರಿಗೆ ಶೇ. 25ರಷ್ಟು ಸಮೂಹ ಯೋಜನೆಗಳಿಗೆ ಶೇ. 50ರಷ್ಟು ಇರುತ್ತದೆ.

ಸಾಲಪಡೆಯುವವನನ್ನು ಗುರುತಿಸಲು ಮತ್ತು ಕೊಟ್ಟ ಹಣಕ್ಕೆ ನೈತಿಕ ಗ್ಯಾರಂಟಿದಾರನಾಗಿ ನಿಲ್ಲಲು ಪಂಚಾಯತಿಗಳು ಬ್ಯಾಂಕ್ ಮ್ಯಾನೇಜರನಿಗೆ ಸಹಾಯ ಮಾಡುತ್ತವೆ. ವಿದ್ಯುತ್ ಉಳುಮೆಯಂತ್ರ ಮೊದಲಾದುವನ್ನು ಕೊಳ್ಳಲು ಪಂಚಾಯತ್ ಸಮಿತಿಗಳಿಗೇ ಬ್ಯಾಂಕು ಹಣ ನೀಡುತ್ತದೆ. ಈ ಯಂತ್ರವನ್ನು ಸಮಿತಿಯು ರೈತರಿಗೆ ಬಾಡಿಗೆಗೆ ಕೊಡುತ್ತದೆ.

ಗ್ರಾಮೀಣ ಶಕ್ತಿಯ ಸಂಘಟನೆ :

ವಾಮರಂಗ ಸರ್ಕಾರದ ಕಾರ್ಯವನ್ನು ಹತ್ತಿರದಿಂದ ಗಮನಿಸುತ್ತಿರುವ ರಾಜಕೀಯ ಸಮೀಕ್ಷಕರ ಪ್ರಕಾರ, ಪಂಚಾಯತಿಗಳ ಮೂಲಕ ಅಭಿವೃದ್ಧಿಯನ್ನು ತರುವ ಯೋಜನೆಯ ಮುಖ್ಯ ರಾಜಕೀಯ ಉದ್ದೇಶ, ಹಳ್ಳಿಯ ಬಡವರನ್ನು ಒಂದು ವರ್ಗವಾಗಿ ಸಂಘಟಿಸಿ, ಗ್ರಾಮೀಣ ಪ್ರದೇಶಗಳ ಮುಖ್ಯಶಕ್ತಿಯನ್ನಾಗಿ ಅವರನ್ನು ಮಾಡುವುದು. ಇದು ಈಗಾಗಲೇ ಆಗುತ್ತಲೂ ಇದೆ. ಉದಾಹರಣೆಗೆ ಮಿಡ್ನಾಪುರ್ ಜಿಲ್ಲೆಯಲ್ಲಿ. ಇದು ಸ್ಪಷ್ಟವಾಗಿದ್ದು, ಹಿಂದಿನ ಅಧಿಕಾರಯುತ ಶಕ್ತಿಗಳಿಗೂ ಪಂಚಾಯತಿಗಳಿಂದ ಸಂಘಟಿತವಾದ ಹೊಸ ಶಕ್ತಿಗಳಿಗೂ ಕೆಲವು ಹೋರಾಟಗಳೂ ನಡೆದು ಹೋಗಿವೆ.

"ಬಡವರ ಜೀವನದ ಆರ್ಥಿಕ ಸುಧಾರಣೆಯನ್ನು ಸಣ್ಣದಾಗಿ ಮಾಡುವುದರ ಮೂಲಕ ಈ ಸಮಾಜದ ಮಿತಿಗಳ ಬಗ್ಗೆ ಅವರ ಪ್ರಜ್ಞೆಯನ್ನು ಹೆಚ್ಚಿಸಬಹುದು. ಸಮಾಜದ ಪುನರ್ರಚನೆ ಆಗದಿದ್ದರೆ, ಒಂದು ಘಟ್ಟದ ನಂತರ ಈಗ ಅವರಿಗೆ ಸಿಗುತ್ತಿರುವ ಆರ್ಥಿಕ ಲಾಭಗಳು ನಿಂತುಹೋಗುತ್ತವೆ ಎಂಬುದು ಅವರಿಗೆ ಅರಿವಾಗುತ್ತದೆ" ಎಂದು ವಾಮರಂಗಕ್ಕೆ ಹತ್ತಿರದ ಮೂಲವೊಂದು ತಿಳಿಸಿದೆ.

ಅಥವಾ ಒಬ್ಬ ವೀಕ್ಷಕರು ಹೇಳಿದಂತೆ, ಹಳ್ಳಿಗಳಿಗೆ ಟ್ರೇಡ್‌ಯೂನಿಯನ್ ಚಳುವಳಿಯ ಪ್ರಾರಂಭಿಕ ರೂಪವನ್ನು ಕೊಂಡೊಯ್ಯುವುದೇ ಉದ್ದೇಶವಾಗಿರಬಹುದು. ರೈತರಿಗೆ ರಾಜಕೀಯ ಕೊಡುವುದಕ್ಕೆ ಮುಂಚೆ ಅವರ ಆರ್ಥಿಕ ಸ್ಥಿತಿ ಮೊದಲು ಸುಧಾರಿಸಬೇಕು. ವಾಮರಂಗ ಈಗ ಗಮನಹರಿಸುತ್ತಿರುವುದು ಈ ಮೊದಲ ಘಟ್ಟದ ಮೇಲೆಯೇ ಎಂದು ಕಾ[illegible].

ತ್ರಿಪುರಾದ ವಾಮರಂಗ ಸರ್ಕಾರವನ್ನು ಪದಚ್ಯುತಿಗೊಳಿಸಲು ಭೀಕರ ತಂತ್ರ

[5ನೇ ಪುಟದಿಂದ]

ಬುಡಕಟ್ಟಿನವರಿಗೆ ಮತ್ತು ಅದಕ್ಕೆ ಸೇರದವರಿಗೆ ಜಿಲ್ಲಾ ಸಮಿತಿ ನಿಯಮವು ಸಮಾನ ರಕ್ಷಣೆ ನೀಡುತ್ತದೆ. ಹಾಗಾದಮೇಲೆ ಅದರ ಬಗ್ಗೆ ಇಷ್ಟು ಕಿರಿಕಿರಿ ಯಾಕೆ ?

ಇದಕ್ಕೆ ಉತ್ತರ ಸರಳವಾಗಿದ್ದು ಎಲ್ಲರಿಗೂ ಗೊತ್ತಾಗುವಂತಿದೆ.

ಅವರು ವಿರೋಧಿಸುವುದು ಏನನ್ನು ?

ವಾಮರಂಗ ಸರ್ಕಾರವು ದುಡಿಯುವ ಮತ್ತು ಬಡ ಜನತೆಯನ್ನು ಕಾಪಾಡುವುದರಿಂದ ಅದು ಆಡಳಿತದಲ್ಲಿರಲು ಈ "ಅಮರ ಬಂಗಾಲೀ" ಮತ್ತು ಉಪಜಾತಿ ಸಮಿತಿಗಳು ಅವಕಾಶ ನೀಡುವುದಿಲ್ಲ.

ಭೂಮಾಲೀಕರ, ಜೋತದಾರರ, ಕಂಟ್ರಾಕ್ಟರುಗಳ, ದೊಡ್ಡ ವರ್ತಕರ ಮತ್ತು ಆಡಳಿತ, ಪೋಲೀಸ್ ಇಲಾಖೆಯಲ್ಲಿರುವ ಭ್ರಷ್ಟ ಅಧಿಕಾರಿಗಳ ಹಿತಕ್ಕೆ ಧಕ್ಕೆ ಬರುವಂತಹ ಕ್ರಮಗಳನ್ನು ಕೈಗೊಳ್ಳುವ ಒಂದು ಸರ್ಕಾರವನ್ನು ಇವರು ಸಹಿಸುವುದಿಲ್ಲ. ಈ ಎಲ್ಲ [illegible] ತಕರಾರಿ ಹಿತಾಸಕ್ತಿಗಳನ್ನು ಅವರು ಕಾಪಾಡಲು ಹೊರಟಿದ್ದಾರೆ.

ವಾಮರಂಗ ಸರ್ಕಾರದ ಜನಪರವಾದ ಕ್ರಮಗಳಿಂದಾಗಿ ಇವರೆಲ್ಲ ಸಂಪೂರ್ಣವಾಗಿ ಜನತೆಯಿಂದ ದೂರವಾಗಿದ್ದಾರೆ. ಜನತೆಯಲ್ಲಿ ಮನಸ ವಿ[…] ಮಾಡಲು, ಹೋರಾಡಲು ಅವರಿಗೆ ಯಾವ ಕಾರ್ಯಕ್ರಮವೂ ಇಲ್ಲ. ಆದ್ದರಿಂದ ಅವರು ಈ ತರದ ಭೀಕರ ತಂತ್ರಗಳನ್ನು ಅನುಸರಿಸುತ್ತಿದ್ದಾರೆ.

ಆದರೆ ಹಿಂದೆಯೂ ಅಂಥ ಅನೇಕ ಸಂಕಷ್ಟಗಳನ್ನೆದುರಿಸಿರುವ ತ್ರಿಪುರಾದ ಹೋರಾಡುವ ಜನತೆ ಇದನ್ನೆದುರಿಸಲೂ ಸಿದ್ಧರಾಗಿದ್ದಾರೆ. ದೇಶದ ಇತರ ಜನತೆಯ ಬೆಂಬಲದೊಂದಿಗೆ ಅವರು ಈ ಆಟವನ್ನು ಸೋಲಿಸುತ್ತಾರೆ.

ಮೈಸೂರಿನಲ್ಲಿ ಬೀಡಿ ಕಾರ್ಮಿಕರ ಪಿಕೆಟಿಂಗ್

ಜ್ಯೋತಿ ಹೋಂ ಇಂಡಸ್ಟ್ರೀಸ್‌ನ ಕಾರ್ಮಿಕರು ಸರ್ಕಾರ ನಿಗದಿಪಡಿಸಿದ ಕೂಲಿ ಜಾರಿಗಾಗಿ ಬಹಿಷ್ಕಾರ ನಡೆಸಿ ಕಾರ್ಖಾನೆಯ ಮುಂದೆ ಪಿಕೆಟಿಂಗ್ ನಡೆಸುತ್ತಿದ್ದಾರೆ. ಶಾಂತರೀತಿಯ ಪಿಕೆಟಿಂಗ್ ನಡೆದದ್ದರಿಂದ ಪೋಲೀಸ್ ಸಿಬ್ಬಂದಿಗೆ ಏನೂ ಮಾಡಲಾಗಲಿಲ್ಲ. ಒಗ್ಗಟ್ಟಿನ ಪ್ರದರ್ಶನ ಕಾರ್ಮಿಕರಿಗೆ ಹೊಸ ಹುರುಪ ತಂದಿದೆ.

ಮಾನವ ಸೇವೆಗಿಂತ ಗೋರಕ್ಷಣೆ ಮುಖ್ಯವೇ ?

ಗೋವಧೆಯನ್ನು ನಿಲ್ಲಿಸಬೇಕೆಂದು ಹಿಂದೂ ಸಂಪ್ರದಾಯಸ್ಥರು ಅದಕ್ಕೋಸ್ಕರ ರಾಜ್ಯಾಂಗವನ್ನೇ ಸರಿಪಡಿಸಬೇಕೆಂದು ಮೊರಾರ್ಜಿ ದೇಸಾಯಿ ಮತ್ತು ಆರ್. ಎಸ್. ಎಸ್. ಹಿಂಬಾಲಕರು ಗಲಾಟೆ ಮಾಡುತ್ತಿರುವ ಸಮಯದಲ್ಲಿ ಮಾನವತಾವಾದಿಯಾಗಿ ಪ್ರಖ್ಯಾತಿ ಹೊಂದಿದ ಸುಪ್ರಸಿದ್ಧ ಹಿಂದೂ ಸನ್ಯಾಸಿ ಸ್ವಾಮಿ ವಿವೇಕಾನಂದರು, ಈ ಸಮಸ್ಯೆಯ ಮೇಲೆ ಎಂತಹ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆಂಬುದನ್ನು ತಿಳಿದುಕೊಳ್ಳುವುದು ಸಮಂಜಸವಾಗಿದೆ.

ಸ್ವಾಮಿಜಿ ಮತ್ತು ಗೋರಕ್ಷಣಾ ಸಮಿತಿಯ ಪ್ರತಿನಿಧಿಯ ನಡುವೆ ಈ ಸಮಸ್ಯೆಯ ಮೇಲೆ ಜರುಗಿದ ಸಂಭಾಷಣೆಯು, ವಿವೇಕಾನಂದ ಬೋಧನೆ ರಚನೆಗಳ ಒಂಬತ್ತನೇ ಸಂಪುಟದಲ್ಲಿ ಈ ರೀತಿ ಇದೆ.

ವಿವೇಕಾನಂದ :

ಈ ವರ್ಷ ಮಧ್ಯ ಭಾರತದಲ್ಲಿ ಘೋರವಾದ ಕ್ಷಾಮ ತಲೆದೋರಿ, ಹಸಿವಿನ ಬಾಧೆಯಿಂದ 9 ಲಕ್ಷ ಮಂದಿ ಸತ್ತಿದ್ದಾರೆ ಎಂಬ ಸುದ್ದಿಯನ್ನು ಭಾರತದ ಪ್ರಭುತ್ವ ತಿಳಿಸಿದೆ. ಕ್ಷಾಮಕ್ಕೆ ಗುರಿಯಾದವರನ್ನು ಉಪಚರಿಸುವುದಕ್ಕೆ ನಿಮ್ಮ ಗೋರಕ್ಷಣಾ ಸಮಿತಿಯವರು ಏನಾದರೂ ಸಹಾಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಾ ?

ಸಮಿತಿಯ ಪ್ರತಿನಿಧಿ :

ಕರ್ಮ ಫಲಿತದಿಂದ ಆ ಕ್ಷಾಮವು ತಲೆದೋರಿದೆ. ಪ್ರಜೆಗಳು ಮಾಡಿದ ಪಾಪಫಲಿತದಿಂದಲೇ ಆ ಕ್ಷಾಮ ಆದುದರಿಂದ ನಾವೇನು ಸಹಾಯ ಕಾರ್ಯಕ್ರಮಗಳನ್ನು ನಿರ್ವಹಿಸಲಿಲ್ಲ. ಮತ್ತೆ ನಮ್ಮ ಸಮಿತಿ ಕೇವಲ ಗೋಸಂರಕ್ಷಣೆ ಮತ್ತು ಆಕೆಯ ಸಂತಾನವನ್ನು ಸಂರಕ್ಷಿಸುವುದಕ್ಕೆ ಉದಯವಾಗಿದೆ.

ವಿವೇಕಾನಂದ :

(ಈ ಮಾತನ್ನು ಕೇಳಿದ ತಕ್ಷಣ ಸ್ವಾಮಿಜಿಯ ಮುಖ ಬಿಳಿಚಿಕೊಂಡು ಅತಿ ಕೋಪಗೊಂಡರು. ಆದರೆ ಸುಧಾರಿಸಿಕೊಂಡು ಹೀಗೆ ಹೇಳಿದರು) ಗೋಮಾತೆಯನ್ನು ಅದರ ಕರ್ಮ ಫಲಿತವಾಗಿಯೇ ಕಸಾಯಿ ಕಟುಕರು ಕೊಲ್ಲುತ್ತಿದ್ದಾರೆ. ಆದುದರಿಂದ ಈ ವಿಷಯದಲ್ಲಿ ನೀವು ಮಾಡಬೇಕಾಗಿರುವ ಕೆಲಸವೇನಿಲ್ಲ.

ಸಮಿತಿಯ ಪ್ರತಿನಿಧಿ :

ಗೋವು ನಮ್ಮ ತಾಯಿ

ವಿವೇಕಾನಂದ : (ನಗುತ್ತಾ) ಅದು ನನಗೆ ಅರ್ಥವಾಗುತ್ತದೆ.

ಕುಣಿಗಲ್‌ನಲ್ಲಿ ಬೀಡಿ ಕಾರ್ಮಿಕರ ಸತ್ಯಾಗ್ರಹ

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಜ್ಯೋತಿ ಹೋಂ ಇಂಡಸ್ಟ್ರೀಸ್‌ನ ಬೀಡಿಕಾರ್ಮಿಕರು ಸರ್ಕಾರ ನಿಗದಿ ಮಾಡಿದ ಕೂಲಿಯ ಜಾರಿಗಾಗಿ ರಾಜ್ಯ ಬೀಡಿಕಾರ್ಮಿಕರ ಫೆಡರೇಶನ್‌ನ ಕರೆಯ ಮೇರೆಗೆ ಕಾರ್ಖಾನೆಯ ಮುಂದೆ 21-5-79 ರಂದು ಕಾಂ. ದಸ್ತಗೀರ್ ಅವರ ನಾಯಕತ್ವದಲ್ಲಿ ಸತ್ಯಾಗ್ರಹ ನಡೆಸಿದರು. ಇದರಿಂದ 22-5-79 ರಂದು ಆಡಳಿತದವರು ಯಾವ ಮುನ್ನೆಚ್ಚರಿಕೆಯನ್ನೂ ಕೊಡದೆ ಲಾಕ್ ಔಟ್ ಜಾರಿಮಾಡಿದ್ದಾರೆ. ಇದನ್ನು ಬೀಡಿ ಫೆಡರೇಶನ್‌ನ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಮತ್ತು ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘದ ಉಪಾಧ್ಯಕ್ಷ ಕಾಂ. ಕೆ. ಆರ್. ನಾಯಕ್ ಅವರು ಬೀಗಮುದ್ರೆ ಖಂಡಿಸಿದ್ದಾರೆ. ಬೀಗಮುದ್ರೆ ಪ್ರತಿಭಟಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕುಣಿಗಲ್ ಶಾಖೆಯು ತಾಲ್ಲೂಕು ತಹಶೀಲ್ದಾರ್ ಕಚೇರಿಯ ಮುಂದೆ ಉಪವಾಸ ಸತ್ಯಾಗ್ರಹ ನಡೆಸಲು ಕರೆಕೊಟ್ಟಿತ್ತು. ಮುಷ್ಕರ ನಡೆಸಿದ ಮೇಲೆ ಕುಣಿಗಲ್ ಪೋಲೀಸ್ ಮುಖ್ಯಾಧಿಕಾರಿಗಳು ಬೀಡಿ ಕಾರ್ಖಾನೆಯ ಮ್ಯಾನೇಜರ್ ಅವರನ್ನು ಕರೆಸಿ ಬೀಗಮುದ್ರೆ ತೆಗೆಸುವಂತೆ ಆಜ್ಞೆ ಮಾಡಿದ ನಂತರ ಕಾರ್ಖಾನೆ ಪುನಃ ಪ್ರಾರಂಭವಾಯಿತು. ಸಾವಿರಾರು ಕಾರ್ಮಿಕರು ಉಪವಾಸ ಮುಷ್ಕರದ ನೇತೃತ್ವವಹಿಸಿದ್ದ ಪಕ್ಷದ ಶಾಖಾ ಕಾರ್ಯದರ್ಶಿ ಕಾಂ. ಬಡೇಸಾಬ್ ಅವರನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿದರು.

○

ಬೀಡಿ ಕಾರ್ಮಿಕರಿಗೆ ಡಿಸ್ಪೆನ್ಸರಿ ತೆರೆಯಲು ಒತ್ತಾಯ

ಬೀಡಿಕಾರ್ಮಿಕರ ಕ್ಷೇಮ ನಿಧಿಯಿಂದ ಉಡುಪಿಯಲ್ಲೊಂದು ಬೀಡಿ ಕಾರ್ಮಿಕರ ಡಿಸ್ಪೆನ್ಸರಿಯನ್ನು ಕೂಡಲೇ ಪ್ರಾರಂಭಿಸುವಂತೆ 27-5-79 ರಂದು ಸೇರಿದ ಬೀಡಿಕಾರ್ಮಿಕರ ಮಹಾಸಭೆಯಲ್ಲಿ ಒತ್ತಾಯಿಸಲಾಯಿತು.

ಬೀಡಿಕಾರ್ಮಿಕರಿಗೆ ನಿಗದಿಪಡಿಸಿದ ಕನಿಷ್ಟ ಕೂಲಿಯನ್ನು ಏಪ್ರಿಲ್ ಒಂದರಿಂದ ಜಾರಿಗೊಳಿಸುವ ಭರವಸೆಯನ್ನು ಸರಕಾರವು ಇತ್ತಿದ್ದರೂ ಕೂಡ ಇದುವರೆಗೆ ಜಾರಿಗೊಳಿಸದಿರುವ ಸರಕಾರದ ನೀತಿಯನ್ನು ತೀವ್ರವಾಗಿ ಖಂಡಿಸಲಾಯ್ತು. ಕೂಡಲೇ ಸರಕಾರ ಜಾರಿಗೊಳಿಸಲು ಕ್ರಮವಹಿಸದಿದ್ದಲ್ಲಿ ರಾಜ್ಯ ಬೀಡಿಕಾರ್ಮಿಕರ ಫೆಡರೇಷನ್ ನೀಡಲಿರುವ ಹೋರಾಟದ ಕರೆಯನ್ನು ಯಶಸ್ವಿಗೊಳಿಸಲೂ ತೀರ್ಮಾನಿಸಲಾಯ್ತು.

ಸಿ. ಐ. ಟಿ. ಯು.ವಿನ ಮುಂಖಂಡ ಕಾಂ. ಪಿ. ರಾಮಚಂದ್ರ ರಾವ್, ವಿಮಾ ನೌಕರರ ಮುಂದಾಳು ಕಾಂ. ಬಿ. ಮಾಧವ, ಹಂಚಿನ ಮಜೂರರ ಮುಂದಾಳು ಕಾಂ. ಕೆ. ಶಂಕರ, ಉಡುಪಿಯ ನೇಯ್ಗೆ ಕಾರ್ಮಿಕ ಮುಂದಾಳು ಕಾಂ. ಕೆ. ವೆಂಕಪ್ಪ ಪೂಜಾರಿ, ರೈತ ಮುಖಂಡ ಕಾಂ. ಡೇವಿಡ್ ಕರ್ಕಡ, ಬೀಡಿಕಾರ್ಮಿಕರ ಹಿರಿಯ ಮುಂದಾಳು ಕಾಂ. ಎಂ. ಸೇಸಪ್ಪ ಮೊದಲಾದವರು ಮಾತನಾಡಿ, ಸಂಘಟನೆಯನ್ನು ಬಲಪಡಿಸಲು ಕರೆಯಿತ್ತರು.

ಮುಂದಿನ ವರ್ಷಕ್ಕೆ ಅಧ್ಯಕ್ಷರಾಗಿ ಕಾಂ. ಸಿ. ಕಾಳಪ್ಪಶೆಟ್ಟಿ, ಉಪಾಧ್ಯಕ್ಷರುಗಳಾಗಿ ಕಾಂ. ಅಂತಪೂಜಾರಿ ಮತ್ತು ಕಾಂ. ಡೇವಿಡ್ ಕರ್ಕಡ, ಕಾರ್ಯದರ್ಶಿಗಳಾಗಿ ಕಾಂ. ಸಾಧು ಅಮೀನ್, ಜತೆ ಕಾರ್ಯದರ್ಶಿಗಳಾಗಿ ಕಾಂ. ಗೋಪಾಲ ಜತ್ತನ್ ಮತ್ತು ಕಾಂ. ತೋಮ ಪೂಜಾರಿ, ಕೋಶಾಧಿಕಾರಿಯಾಗಿ ಕಾಂ. ಕೆ. ಲಕ್ಷ್ಮಣನವರನ್ನೂ ಆಯ್ಕೆಮಾಡಲಾಯಿತು. 12 ಮಂದಿಯ ಕಾರ್ಯಕಾರಿ ಸಮಿತಿಯನ್ನೂ ಆಯ್ಕೆಮಾಡಲಾಯಿತು. ದುಡಿಯುವ ಮಹಿಳೆಯರು ಅಧಿಕ ಸಂಖ್ಯೆಯಲ್ಲಿದ್ದ ಈ ಸಭೆಯಲ್ಲಿ 30ರ ದುಡಿಯುವ ಮಹಿಳೆಯರ ಬೇಡಿಕೆ ದಿನಾಚರಣೆಯನ್ನು ಯಶಸ್ವಿಗೊಳಿಸಲೂ ತೀರ್ಮಾನಿಸಲಾಯ್ತು.

●

ತುಮಕೂರಿನಲ್ಲಿ ಬೀಡಿ ಕಾರ್ಮಿಕರ ಮುಷ್ಕರ

ರಾಜ್ಯ ಬೀಡಿ ಕಾರ್ಮಿಕರ ಹೋರಾಟದ ಫಲವಾಗಿ ಸರಕಾರವು 1979ನೇ ಏಪ್ರಿಲ್ 2ರಂದು ಸಾವಿರ ಬೀಡಿಗಳ ಕೂಲಿ ರೂ. 5-75 ಎಂದು ನಿಗದಿಪಡಿಸಿ ಆಜ್ಞೆ ಹೊರಡಿಸಿತ್ತು. ಆದರೆ ಪ್ರಮುಖ ಬೀಡಿ ಮಾಲೀಕರು ಈ ಕೂಲಿಯನ್ನು ಜಾರಿಗೆ ತರದಿರುವುದರಿಂದ, ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ ಮುಷ್ಕರ ನಡೆಸಲು ಕರೆಕೊಟ್ಟಿದೆ. ಇದರ ಪ್ರಕಾರ ತುಮಕೂರಿನ ಬೀಡಿ ಕೆಲಸಗಾರರ ಸಂಘದವರು 21-5-79 ರಂದು ಮುಷ್ಕರ ಹೂಡಿ, ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಹೆಚ್ಚಿಸಿದ ಕೂಲಿಯನ್ನು ಪ್ರಕಟಿಸಿದ ತಾರೀಖಿನಿಂದ ಜಾರಿಗೊಳಿಸದಿದ್ದರೆ ಮಾಲೀಕರ ಮೇಲೆ ಕ್ರಮತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ರಾಜ್ಯದ ಕಾರ್ಮಿಕ ಮಂತ್ರಿಗಳಿಗೂ, ಲೇಬರ್ ಕಮೀಷನರ್‌ರಿಗೂ ತಂತಿ ಕಳುಹಿಸಲಾಗಿದೆ.

ಈ ಪ್ರಕರಣ ನಡೆದ ನಂತರ ತುಮಕೂರು ಮತ್ತು ಕುಣಿಗಲ್‌ನಲ್ಲಿ ಮುನ್ನೆಚ್ಚರಿಕೆ ಕೊಡದೆ ಕಾರ್ಖಾನೆ ಲಾಕ್ ಔಟ್‌ಮಾಡಲಾಗಿದೆ. ಈ ಬಗ್ಗೆ ಪ್ರತಿಭಟಿಸಿ, 23-5-79ರಿಂದ ತುಮಕೂರು ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಉಪವಾಸ ಸತ್ಯಾಗ್ರಹ ನಡೆಸಲಾಗುತ್ತಿದೆ. ಈ ನ್ಯಾಯಯುತ ಹೋರಾಟಕ್ಕೆ ಕಾರ್ಮಿಕರು, ಸಾರ್ವಜನಿಕರು ಬೆಂಬಲ ಕೊಡಬೇಕಾಗಿ ಕೋರಲಾಗಿದೆ.

○

ಜಪ್ಪಿನಮೊಗ್ರು ಯುವಕ ಮಂಡಲದ ಸಭೆ

ದ. ಕನ್ನಡ ಜಿಲ್ಲೆಯ ಮಂಗಳೂರಿನ ಜಪ್ಪಿನಮೊಗ್ರು ಗ್ರಾಮದ ಯುವಕ ಮಂಡಲದ ಹದಿನಾರನೇ ವಾರ್ಷಿಕ ಸಭೆಯು 17-5-79 ರಂದು ಪಂಚಾಯತಿ ಛೇರ್‌ಮನ್ ಜೆ. ಸದಾಶಿವಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಜೆ. ಬಾಲಕೃಷ್ಣಶೆಟ್ಟಿ ಅವರು ಸ್ವಾಗತಿಸಿದ ನಂತರ ಕಾರ್ಯದರ್ಶಿ ಜೆ. ಚಂದ್ರಹಾಸ ಅವರು ವರದಿ ಮತ್ತು ಲೆಕ್ಕಪತ್ರಗಳನ್ನು ಸಭೆಯ ಮುಂದಿಟ್ಟರು. ಹೊಸ ಕಾರ್ಯಕಾರಿ ಸಮಿತಿಯನ್ನು ನಂತರ ಚುನಾಯಿಸಲಾಯಿತು.

○

ರೈತ-ಕೃಷಿಕೂಲಿಗಾರರ ಹೋರಾಟ, ಬನಶಂಕರಿ ಬಡಜನತೆಯ ಸತ್ಯಾಗ್ರಹ

28-5-79 ರಂದು ಬೆಂಗಳೂರು ಜಿಲ್ಲಾ ರೈತಸಂಘದ ಆಶ್ರಯದಲ್ಲಿ ಇನ್ನೂರು ಮಹಿಳೆಯರನ್ನೊಳಗೊಂಡ ಸುಮಾರು ಸಾವಿರ ರೈತ ಕೃಷಿಕೂಲಿಗಾರರ ಮೆರವಣಿಗೆ ಬೇಗೂರು, ಉತ್ತರಹಳ್ಳಿ ಕೆಂಗೇರಿ ಹೋಬಳಿಗಳಿಂದ ಹದಿನೈದು ಮೈಲಿಗಳ ನಡಿಗೆಯಲ್ಲಿ ಬಂದು ಸಂಜೆ ಮೂರು ಗಂಟೆಗೆ ತಹಶೀಲ್ದಾರ್‌ರವರ ಕಛೇರಿಯನ್ನು ತಲುಪಿ ಈ ಕೆಳಕಂಡ ಮನವಿ ಪತ್ರವನ್ನರ್ಪಿಸಿತು.

ರೈತರ ಪ್ರತಿನಿಧಿಗಳಾದ ಕಾಂ. ಹೆಚ್. ಮುಗುವಾಳಪ್ಪ, ಪಿ. ಜಗನ್ನಾಥ್, ರಾಮಭದ್ರಯ್ಯ, ಲಕ್ಕಣ್ಣ ಮತ್ತು ಶಾಮಣ್ಣ ರೆಡ್ಡಿಯವರು ಬೇಡಿಕೆಯ ಮನವಿ ಪತ್ರವನ್ನರ್ಪಿಸಿದರು. ರೈತರ ಬೇಡಿಕೆಗಳು ಈ ರೀತಿ ಇವೆ.

ಸರ್ಕಾರ ಬಹಳ ವರ್ಷಗಳಿಂದಲೂ ಬಂಜರು ಭೂಮಿಯನ್ನು ಬಡರೈತರಿಗೆ ಹಂಚುವುದಾಗಿ ಆಶ್ವಾಸನೆ ಕೊಡುತ್ತ ಬಂದಿದ್ದರೂ ಈವರೆವಿಗೆ ಸರಿಯಾಗಿ ಕಾರ್ಯಗತವಾಗಿರುವುದಿಲ್ಲ. ಅಲ್ಪಸ್ವಲ್ಪ ಹಂಚಿಕೆಯಾಗಿದ್ದರೂ, ಜಮೀನಿಗೆ ಹಾಕಿರುವ ಕಿಮ್ಮತ್ತು ಕೊಡಲಾಗದೆ ಬಡರೈತರು ತತ್ತರಿಸುತ್ತಿದ್ದಾರೆ. ಸರ್ಕಾರ ಬಡರೈತರಿಗೆ ಉಚಿತ ಭೂಮಿಯನ್ನು ಹಂಚಿಕೊಡಬೇಕು.

ವಾರ್ಷಿಕ 2400 ರೂ. ವರಮಾನವಿರುವ ಬಡರೈತ ಕೃಷಿಕಾರ್ಮಿಕರ ಸಾಲ ಋಣ ಮುಕ್ತ ಕಾಯಿದೆಯ ಪ್ರಕಾರ ಸರ್ಕಾರ ರದ್ದು ಮಾಡಬೇಕು, ಮತ್ತು ರೈತರನ್ನು ಜಪ್ತಿ ಮಾಡುತ್ತಿರುವ ರೆವಿನ್ಯೂ ಅಧಿಕಾರಿಗಳು, ಸಹಕಾರಿ ಬ್ಯಾಂಕ್ ಅಧಿಕಾರಿಗಳನ್ನು ತಡೆಯಬೇಕು.

ಭೂಸುಧಾರಣೆ ಜಾರಿಯಲ್ಲಿದ್ದರೂ, ಗೇಣಿದಾರರಿಗೆ ನ್ಯಾಯವಾದ ರಕ್ಷಣೆ ದೊರೆಯುತ್ತಿಲ್ಲ. ಗೇಣಿದಾರರಿಗೆ ಉಚಿತ ಭೂಮಿಯನ್ನು ಕೊಡುವುದರ ಜೊತೆಯಲ್ಲಿ ಕೃಷಿ ಉತ್ಪನ್ನ ಸಲಕರಣೆಗಳನ್ನು ಕಡಿಮೆ ಬೆಲೆಗೆ ಸುಲಭವಾಗಿ ದೊರೆಯುವಂತೆ ಮಾಡುವುದೇ ಅಲ್ಲದೆ ಬಡರೈತರಿಗೆ ಪೋಲೀಸ್ ರಕ್ಷಣೆಯನ್ನು ಒದಗಿಸಬೇಕು. ಅಲ್ಲದೆ ಬಡರೈತ ಹಾಗೂ ವಿಧವೆಯರು ಕಳೆದುಕೊಂಡ ಜಮೀನಿಗೆ ಸರ್ಕಾರ ಒಂದೇಕಂತಿನಲ್ಲಿ ಹಣ ಪಾವತಿ ಮಾಡಬೇಕು. ಭೂಪಂಚಾಯತಿಗಳಲ್ಲಿ ರೈತರ ಪ್ರತಿನಿಧಿಗಳು ಇರಲು ಅವಕಾಶ ಮಾಡಿಕೊಡಬೇಕು.

ಸರ್ಕಾರ ವಸತಿಹೀನ ರೈತರಿಗೆ ನಿವೇಶನ ಕೊಟ್ಟು ಜನತಾ ಗೃಹಗಳನ್ನು ಕಟ್ಟಿಕೊಡುತ್ತಿದೆಯೆಂದು ಹೇಳುತ್ತಿರುವುದು ಸರಿಯಷ್ಟೆ, ಅದು ಸರಿಯಾಗಿ ಕಾರ್ಯಗತವಾಗುತ್ತಿಲ್ಲ. ಆದ್ದರಿಂದ ಸರಕಾರವೇ ವಹಿಸಿಕೊಂಡು ಕೆಲವರ್ಷಗಳಾದರೂ ಮನೆಗಳು ಗಾಳಿ ಮಳೆಗೆ ಉರುಳಿ ಹೋಗದಂತೆ ಜವಾಬ್ದಾರಿಕೆಯೊಂದ ಕಟ್ಟಿಸಿಕೊಡಬೇಕು.

ಕೃಷಿಕಾರ್ಮಿಕರ ಕನಿಷ್ಠ ಕೂಲಿ ಎಂಟು ರೂ. ಜಾರಿಯಾಗಬೇಕು. ಕನಿಷ್ಠ ಕೂಲಿಯನ್ನು ಜಾರಿಗೊಳಿಸದೆ ಕೃಷಿಕಾರ್ಮಿಕರನ್ನು ಗೋಳುಹುಯ್ದುಕೊಳ್ಳುತ್ತಿರುವ ಮಾಲೀಕರ ವಿರುದ್ಧ ಬಿಗಿಯಾದ ಕಾನೂನುಕ್ರಮ ಜರುಗಿಸಬೇಕು. (ಉದಾಹರಣೆಗೆ, ರಷ್ಯಾದೇಶದ ಮಾಲೀಕ ಶ್ರೀ ರೋರಿಚ್‌ರ ಎಸ್ಟೇಟಿನಲ್ಲಿ ಹಲವು ವರ್ಷಗಳಿಂದ ದುಡಿಯುತ್ತಿರುವ ಕೃಷಿಕಾರ್ಮಿಕರಿಗೆ ಕನಿಷ್ಠಕೂಲಿ ಜಾರಿಯಾಗಿಲ್ಲ. ಈ ಕಾರ್ಮಿಕರು ಹಲವು ಬಾರಿ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಾ ಬಂದಿರುತ್ತಾರೆ.)

ಕೆಲವು ಕಡೆ ಹರಿಜನ ಗಿರಿಜನರಿಗೆ ಅರಣ್ಯ ಜಮೀನು ಮಂಜೂರಾಗಿದ್ದರೂ ರೆವಿನ್ಯೂ ಅಧಿಕಾರಿಗಳು ಕೆಲವು ವ್ಯಕ್ತಿಗಳ ಪ್ರಭಾವಕ್ಕೆ ಒಳಗಾಗಿ ಜಮೀನನ್ನು ಹಂಚಿ ಖಾತೆಮಾಡಿಕೊಡದೆ ಕಿರುಕುಳಕೊಡುತ್ತಿದ್ದಾರೆ. ಉದಾಹರಣೆಗೆ 8-5-59ರ ಸಿ. ಸಂ. ಎ. ಎಫ್. ಸಿ. 4, ಡಿ. ಎಸ್. ಟಿ. 57ರ ಪ್ರಕಾರ ಒಡ್ಡರಪಾಳ್ಯದ ಸರ್ವೆ ನಂ. 38 ರಲ್ಲಿ ಗುಳ್ಳಪ್ಪ ಸ್ಟೇಟ್ ಫಾರೆಸ್ಟ್‌ನ 800 ಎಕರೆ ಜಮೀನು ಮಂಜೂರಾಗಿದ್ದರೂ 20 ವರ್ಷಗಳಿಂದಲೂ ಅಲ್ಲಿನ ಬಡರೈತರಿಗೆ ಹಂಚದೆ ತೊಂದರೆ ಕೊಡುತ್ತಿದ್ದಾರೆ. ಅದನ್ನು ಕೂಡಲೇ ವ್ಯವಸ್ಥಿತವಾಗಿ ಹಂಚಬೇಕು.

ರೈತರು ಬೆಳೆದ ಬೆಳೆಗೆ ನ್ಯಾಯಬೆಲೆ ದೊರೆಯುವಂತೆ ಮಾಡಬೇಕು. ಅದೇ ಕಾಲಕ್ಕೆ ರೈತರು ಕೊಳ್ಳುವ ಅವಶ್ಯಕ ಸಾಮಗ್ರಿಗಳ ಬೆಲೆಯನ್ನು ತಡೆಗಟ್ಟಬೇಕು.

3-4-79ರಿಂದ ಸರ್ಕಾರ, ರೆವಿನ್ಯೂ ಅಧಿಕಾರಿಗಳು ಮತ್ತು ಪೋಲೀಸರ ನೆರವಿನಿಂದ ಬನಶಂಕರಿಯ ನಿವಾಸಿಗಳ ಗುಡಿಸಲುಗಳನ್ನು ಧ್ವಂಸಮಾಡಿ ಅವರನ್ನು ಬೀದಿಪಾಲು ಮಾಡಿದ್ದಾರೆ. ಅವರಿಗೆ ಮನೆ ಕಟ್ಟಿಕೊಳ್ಳಲು ಜಾಗ ಕೊಡುವುದೇ ಅಲ್ಲದೆ ಅವರು ಕಳೆದುಕೊಂಡಿರುವ ಅಲ್ಪಸ್ವಲ್ಪ ಆಸ್ತಿಗೆ ಪರಿಹಾರ ಕಟ್ಟಿಕೊಡಬೇಕು.

ಈ ಮೇಲ್ಕಂಡ ಮನವಿ ಪತ್ರದ ಸಾರಾಂಶಗಳನ್ನು ತಾಲ್ಲೂಕ್ ಕಛೇರಿ ಎದುರು ನೆರೆದ ರೈತರ ಸಭೆಯ ಕೊನೆಯಲ್ಲಿ ಕಾಂ. ಎಸ್. ಸೂರ್ಯನಾರಾಯಣರಾವ್, ಕಾಂ. ಮುಗುವಾಳಪ್ಪ, ಜಗನ್ನಾಥ್‌ರವರುಗಳು ವಿವರಿಸಿದ ನಂತರ ಜಿಲ್ಲಾ ರೈತ ಸಂಘದ ಸದಸ್ಯ ಕಾಂ. ಶಾಮಣ್ಣ ರೆಡ್ಡಿಯವರು ವಂದನಾರ್ಪಣೆ ಮಾಡಿದರು.

ರೈತರ ಮೆರವಣಿಗೆಯಲ್ಲೇ ಐಕ್ಯತೆಯಿಂದ ಬಂದಿದ್ದ ಬನಶಂಕರಿಯ ಗುಡಿಸಲು ನಿವಾಸಿಗಳು ತಹಶೀಲ್ದಾರ್ ಆಫೀಸ್ ಎದುರು ತಾವು 3-4-79ರಂದು ಕಳೆದುಕೊಂಡ ಆಸ್ತಿ ಮತ್ತು ಮನೆಕಟ್ಟಿಕೊಳ್ಳಲು ನಿವೇಶನಕ್ಕಾಗಿ ಸರ್ಕಾರವನ್ನು ಒತ್ತಾಯಪಡಿಸಲು ಸರದಿ ಉಪವಾಸಕ್ಕೆ ಕುಳಿತ ನಂತರ ಸಭೆ ಮೆರವಣಿಗೆಗಳು ಮುಕ್ತಾಯವಾದುವು.

ಸರಕಾರೀ ಭೂಮಿಯ ಬೇಸಾಯಗಾರರು ಚಳುವಳಿಯ ಹಾದಿಯಲ್ಲಿ

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ರೈತಸಂಘದ ಸಭೆಯು ತಾ. 24-5-79ರಂದು ಪುತ್ತೂರು ರೈತಸಂಘದ ಕಚೇರಿಯಲ್ಲಿ ಸೇರಿತು. ಇತ್ತೀಚೆಗೆ ನಡೆದ ರಾಜ್ಯಸಮ್ಮೇಳನದ ತೀರ್ಮಾನಗಳನ್ನು ರಾಜ್ಯರೈತಸಂಘದ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರ ರಾವ್‌ರವರು ವಿವರಿಸಿದರು.

ತಾಲ್ಲೂಕಿನಾದ್ಯಂತ ವಿವಿಧ ಗ್ರಾಮಗಳಿಂದ ಬಂದ ರೈತಕಾರ್ಯಕರ್ತರು ಎಲ್ಲಾ ಕಡೆಗಳಲ್ಲಿರುವ ದರ್ಖಾಸ್ತುದಾರರ ಕಷ್ಟಗಳನ್ನು ವಿವರಿಸಿದರು. ಪುತ್ತೂರು ತಾಲ್ಲೂಕಿನಲ್ಲಿರುವ ಸುಮಾರು 5000 ಜನ ಬಂಜರುಭೂಮಿ ಕೃಷಿಕರಿಗೆ ಸೊಸೈಟಿಗಳಿಂದ D' ನೋಟೀಸು ಇಲ್ಲದೆ, ಯೂ ಪಟ್ಟೆಯಿಲ್ಲದೆ ಇರುವ ಕಾರಣ ತೋರಿಸಿ ಕೃಷಿಯೋಗ್ಯಸಾಲಗಳನ್ನು ನಿರಾಕರಿಸಲಾಗುತ್ತಿದೆ.

ಆದುದರಿಂದ 1. ಎಲ್ಲಾ ಭೂರಹಿತ, ಸರಕಾರೀ ಬಂಜರುಭೂಮಿಯ ಕೃಷಿಕರಿಗೆ ಕೂಡಲೇ ಸರಕಾರವು ಭೂಮಿಯ ಹಕ್ಕು ಪತ್ರ (ಡಿ' ನೋಟೀಸು) ವನ್ನು ನೀಡಬೇಕು. 2. ಪಟ್ಟೆಯಾ ಹಕ್ಕುಪತ್ರಗಳು ಇರಲಿ, ಇಲ್ಲದಿರಲಿ ಗ್ರಾಮಾಂತರ ಸಹಕಾರೀ ಬ್ಯಾಂಕುಗಳಿಂದ ಪ್ರತಿಯೊಬ್ಬ ಕೃಷಿಕನಿಗೂ, ರೈತನಿಗೂ ಕೃಷಿಯೋಗ್ಯ ಸಾಲಗಳನ್ನು ಕಡಿಮೆ ದರದ ಬಡ್ಡಿಯಲ್ಲಿ ಒದಗಿಸಿಕೊಡಬೇಕು. 3. ರೈತರ ಬೆಳೆಗಳಿಗೆ ನ್ಯಾಯವಾದ ಬೆಲೆ ದೊರೆಯುವಂತಾಗಬೇಕು. ಮುಂತಾದ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ಕರ್ನಾಟಕ ರಾಜ್ಯ ಸರಕಾರದ ಕಂದಾಯ ಸಚಿವರಿಗೆ ಕಳುಹಿಸಿಕೊಡುವ ಚಳುವಳಿಯ ಕಾರ್ಯಕ್ರಮವನ್ನು ಹಾಕಲಾಯಿತು. ರೈತರ ಈ ಬೇಡಿಕೆಗಳನ್ನು ಈಡೇರಿಸಲು ಸರಕಾರವು ವಿಳಂಬ ಮಾಡಿದಲ್ಲಿ ತೀವ್ರ ರೀತಿಯ ಹೋರಾಟ ನಡೆಸಲು ರೈತರು ಸಂಘಟಿತರಾಗುವ ಮತ್ತು ರೈತಸಂಘವನ್ನು ತಾಲ್ಲೂಕಿನಲ್ಲಿ ಪ್ರಭಲಗೊಳಿಸುವ ಮತ್ತಿತರ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಆರಂಭದಲ್ಲಿ ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಬಿ. ವಿಷ್ಣುಮೂರ್ತಿಯವರು ಸ್ವಾಗತಿಸಿ ಚಟುವಟಿಕೆಗಳ ಬಗ್ಗೆ ವಿವರಣೆ ನೀಡಿದರು. ಕೊನೆಯಲ್ಲಿ ಕಾಂ. ಎನ್. ಎ. ಸಬೆಸ್ಟಿಯನ್ ಧನ್ಯವಾದವಿತ್ತರು.

ಸಂಪಾದಕೀಯ

[1ನೇ ಪುಟದಿಂದ]

ಆದರೆ ಸರ್ಕಾರದ ಈ ಮಾತೇನೂ ಭರವಸೆಯದ್ದಲ್ಲ. ಜನತೆಯ ಸಮಸ್ಯೆಗಳ ಪರಿಹಾರಕ್ಕೆ ಕಾಳಜಿಯಿರುವ ಪಕ್ಷಗಳೂ, ವ್ಯಕ್ತಿಗಳೂ ಒಂದು ಸೇರಿ ನಿರ್ದಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಸಂಯುಕ್ತ ಚಳುವಳಿಯನ್ನು ನಡೆಸಿದರೆ ಮಾತ್ರ ಚುನಾವಣೆಗಳೂ ನಡೆಯಬಹುದು ; ಚುನಾವಣೆಯಲ್ಲಿ ಜನರ ಹಿತಗಳನ್ನು ಪ್ರತಿನಿಧೀಕರಿಸುವ ಮತ್ತು ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುವ 'ಪ್ರತಿನಿಧಿಗಳು ಚುನಾಯಿತರೂ ಆಗಬಹುದು. ಈ ದಿಸೆಯಲ್ಲಿ ಈ ಹಿಂದೆ ಪ್ರಾರಂಭಗೊಂಡ ಪ್ರಯತ್ನವನ್ನು ಮುಂದುವರೆಸಬೇಕು. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಇದಕ್ಕೆ ಹೆಚ್ಚಿನ ಮುತುವರ್ಜಿ ವಹಿಸಬೇಕು.

ಮುನಿಸಿಪಲ್ ಚುನಾವಣೆ

ಈ ತನಕ ದೊರೆತ ವರದಿ ಪ್ರಕಾರ ಉ. ಕ. ಜಿಲ್ಲೆಯ ಮುಖ್ಯ ಕಾರ್ಮಿಕ ಕೇಂದ್ರ ದಾಂಡೇಲಿಯಲ್ಲಿ ಮಾರ್ಕ್ಸಿಸ್ಟ್ ಪಕ್ಷವು 18 ಸ್ಥಾನಗಳಿಗೂ ಸ್ಪರ್ಧಿಸಿದ್ದು, 10 ಸ್ಥಾನಗಳನ್ನು ಗೆದ್ದಿದೆ.

ದ. ಕ. ಜಿಲ್ಲೆಯ ಸುಳ್ಯದಲ್ಲಿ ಏಳು ಸ್ಥಾನಗಳಲ್ಲಿ ಸ್ಪರ್ಧಿಸಿದ್ದು, ಎರಡು ಸ್ಥಾನಗಳನ್ನು ಗೆದ್ದಿದೆ.

ಹತ್ತಿಗಿರಣಿ ಕಾರ್ಮಿಕರ ಸಂಯುಕ್ತ ಹೋರಾಟ

[1ನೇ ಪುಟದಿಂದ]

ಕಾರ್ಮಿಕರ ಸಂಯುಕ್ತ ಚಳುವಳಿಯ ಮುಖಂಡತ್ವವು ತೀರ್ಮಾನಿಸಿದೆ, ಮ್ಯಾನೇಜುಮೆಂಟು ನಿಶ್ಚರ್ತವಾಗಿ ಒಟ್ಟಿಗೆ ಮಾತುಕತೆಗೆ ಬಂದಿಲ್ಲವಾದರೆ, ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ. ಮತ್ತು ಶ್ರೀರಾಮುಲು ಅವರ ನೇತೃತ್ವದ ಐ.ಎನ್.ಟಿ.ಯು.ಸಿ. ಸಂಘಟನೆಗಳು ಕಾರ್ಮಿಕರ ಸಂಯುಕ್ತ ಚಳುವಳಿಯನ್ನು ಬಲಗೊಳಿಸಲೂ ನಿರ್ಧಾರ ಮಾಡಿವೆ.

ಪರಿಸರ

ಹತ್ತಿ ಗಿರಣಿ ಕಾರ್ಮಿಕರ ವೇತನವನ್ನು ಪರಿಶೀಲಿಸಿದರೆ ಇತರ ರಾಜ್ಯಗಳಿಗಿಂತ ಕರ್ನಾಟಕದಲ್ಲೇ ಕಮ್ಮಿ.
ಪಶ್ಚಿಮ ಬಂಗಾಳ 500 ರೂ., ತಮಿಳುನಾಡು 500 ರೂ., ಕೇರಳ 470 ರೂ., ಮಹಾರಾಷ್ಟ್ರ 500 ರೂ., ಕರ್ನಾಟಕದಲ್ಲಿ 370 ರೂ.

ಪತ್ರಿಕಾಗೋಷ್ಠಿಯೊಂದರಲ್ಲಿ
—ಶ್ರೀರಾಮುಲು
ಮತ್ತು ಸಿ.ಐ.ಟಿ.ಯು. ರಾಜ್ಯಸಮಿತಿಯ ಕಾರ್ಯದರ್ಶಿ.

ನಾಗಪಟ್ಟನಂ ಲೋಕಸಭಾ ಚುನಾವಣೆಗೆ ಬೆಂಬಲ ಕೇಳಿದ ಎ.ಐ.ಎ. ಡಿ.ಎಂ.ಕೆ. ಮತ್ತು ಸಿ.ಪಿ.ಐ. ಮನವಿಗಳಲ್ಲಿ ಜನತಾಪಕ್ಷ ಸಿ.ಪಿ.ಐ. ಅಭ್ಯರ್ಥಿಯನ್ನು ಬೆಂಬಲಿಸಿದೆ.

ಕೇಂದ್ರ ಇಂಧನ ಖಾತೆಯ ಸಚಿವ
—ಪಿ. ರಾಮಚಂದ್ರನ್.

ಮಹಾತ್ಮಗಾಂಧೀಜಿಯವರು ಬ್ರಿಟೀಷರ ವಿರುದ್ಧ 'ಭಾರತ ಬಿಟ್ಟು ತೊಲಗಿ' (ಕ್ವಿಟ್ ಇಂಡಿಯಾ) ಚಳುವಳಿ ಹೂಡಿದಾಗ ಈ 'ದೇಶಪ್ರೇಮಿ' ಆರ್.ಎಸ್.ಎಸ್. ನವರು ಬ್ರಿಟೀಷರ ಏಜೆಂಟರಂತೆ ನಡೆದುಕೊಂಡಾಗಲೇ ಇವರ (ಆರ್.ಎಸ್.ಎಸ್.) ನಿಜವಾದ ಬಣ್ಣ ನನಗೆ ಗೊತ್ತಾಯಿತು.

ಇಲ್ಲಸ್ಟ್ರೇಟೆಡ್ ವೀಕ್ಲಿಗೆ ಕೊಟ್ಟಿರುವ ಸಂದರ್ಶನದಲ್ಲಿ
ಕೇಂದ್ರದ ಮಾಜಿ ಆರೋಗ್ಯ ಸಚಿವ
—ರಾಜ್‌ನಾರಾಯಣ್.

ಆರ್.ಎಸ್.ಎಸ್. ಸಂಘಟನೆಯು ಜಾತ್ಯಾತೀತತೆ ಮತ್ತು ಆಧುನಿಕತೆಗೆ ವಿರೋಧಿಯಾದ ಸಂಸ್ಥೆಯಾಗಿದೆ.

—ಇ. ಎಂ. ಎಸ್. ನಂಬೂದಿರಿಪಾದ್.

ಹರಿಜನ ಸಂರಕ್ಷಣೆಗಾಗಿ ಆಡಳಿತ ಪಕ್ಷವು ಸಂಸತ್ತಿನಲ್ಲಿ ಮಂಡಿಸಿದ ವಿಧೇಯಕವೊಂದು ಅದೇ ಪಕ್ಷದ ಸದಸ್ಯರ ಗೈರುಹಾಜರಿಯಿಂದ ಬಿದ್ದು ಹೋಯಿತು.

—ಎಲ್ಲ ಭಾರತೀಯ ದಿನಪತ್ರಿಕೆಗಳಲ್ಲಿ ವರದಿಯಾದ
ಒಂದು ಪ್ರಮುಖ ಸುದ್ದಿ.

ತಂಜಾವೂರು ಚಿಕ್ಕಮಗಳೂರಲ್ಲ M.G.R. ದೇವರಾಜ್ ಅರಸ್ ಅಲ್ಲ ಕರುಣಾನಿಧಿ ವೀರೇಂದ್ರಪಾಟಲ್ ಅಲ್ಲ.

—ಅನ್ಬಳಗನ್, ಕುಮುದಂ ವಾರಪತ್ರಿಕೆ.

Printed by F. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154